





ವೃಕ್ಷ ರಕ್ಷಣೆಗೆ ನನ್ನ ಕಾಣಿಕೆ ಏನು ಎಂದು ಕೇಳಿದಿರಾ?
ನಾನೊಮ್ಮೆ ಒಂದು ಮರಕುಟಿಗ ಪಕ್ಷೀನ
ಓಡಿಸಿದ್ದೇರಿ....



# ಅಪರಂಜಿ



ತಿಳಿನಗೆಯ ಕಾರಂಜಿ

ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ



ಸಂಪುಟ 29
ಸಂಚಿಕೆ - 9
ಜೂನ್ - 2012

## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ಪ್ಲಾಸ್ಮಾ ಟೀವಿ ಪ್ರಕರಣ | **ವತ್ಸನ** | 3 |
| ವಿಶ್ವ ಪೊರಕೆ ದಿನಾಚರಣೆ | **ಸಿ.ಆರ್. ಸತ್ಯ** | 8 |
| ಪ್ರಳಯ ಪ್ರಲಾಪ | **ಆನಂದ** | 12 |
| ಹುರುಳಿ ಕಟ್ಟು | **ಎಚ್. ಗೋಪಾಲಕೃಷ್ಣ** | 14 |
| ತುಂತುರು | **ದಂನಾಆ** | 18 |
| ಕಾಗೆಗಳ ಟೀಮ್.... | **ರಮ್ಯ** | 19 |
| ಸೀನು ಮಾಡಿದ...... | **ಶ್ರೀನಿವಾಸ ಕುಂಡಂತಾಯ** | 21 |
| ಬಲಿ ಚಕ್ರವರ್ತಿಯ ಅಜ್ಜ | **ಎಚ್. ಶಾಂತರಾಜ ಐತಾಳ್** | 28 |
| ಎಜುಕೇಷನ್ ಎಡವಟ್ಟು | **ಇ.ಆರ್. ರಾಮಚಂದ್ರನ್** | 32 |
| ಶಕ್ತಿಶಾಲಿ ತೂಕಡಿಕೆ...... | **ನಂದಿನಿ ಕಾಪಡಿ** | 36 |


**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*
ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಸಮಸ್ಯೆ ನೀಗಿಸದ ಸರ್ಕಾರಕ್ಕೆ ಪಾಠ ಕಲಿಸಿ – ಶೀರ್ಷಿಕೆ

**● ಮೇಷ್ಟ್ರರನ್ನು ಎಲ್ಲಿಂದ ಕರೆಸೋದು !!**

★★★

ಹಾವೇರಿ ಗಲಾಟೆ : ಕತ್ತಿ ಶಂಕೆ – ಪತ್ರಿಕೆ

**● ಹೆದರ ಬೇಡಿ, ಅವರ ಪೂರ್ಣ ಹೆಸರು ಉಮೇಶ ಕತ್ತಿ ಅಂತ !!**

★★★

''ಇರಾನ್ ಮೈತ್ರಿ ಕಡಿತಕ್ಕೆ ಭಾರತದ ಮೇಲೆ ಅಮೆರಿಕಾ ಒತ್ತಡ''

''ಹಿಲರಿ ಕ್ಲಿಂಟನ್ ಇಡ್ಲಿ ವಡೆ ಉಪ್ಪಿಟ್ಟು ತಿಂದರಂತೆ''

ಇವೆರಡಕ್ಕೂ ಯಾವ ಸಂಬಂಧವನ್ನೂ ಕಲ್ಪಿಸಬಾರದು !

★★★

''ಅಮೂಲ್ಯ ಮತವನ್ನು ಮಾರಿಕೊಳ್ಳಬೇಡಿ'' – ಹೇಳಿಕೆ

**● ಅರೆ, ನಮಗದು ಹೊಳೆದೇ ಇರಲಿಲ್ಲ !!**

★★★

ಮೊಬೈಲ್ ದರ ದುಪ್ಪಟ್ಟು – ಪತ್ರಿಕೆ

**● ನಿಶ್ಯಬ್ಧ ವಾತಾವರಣಕ್ಕೆ ನಾಂದಿ !!**

★★★

ನಕಲಿ ಧ್ವನಿ ಸುರುಳಿ ದಂಧೆಯ ವಿರುದ್ಧ ಕ್ರಮಕ್ಕೆ ಒತ್ತಾಯ – ಪತ್ರಿಕೆ

**● ಅವರನ್ನು ''ಸಿಡಿ''ಸ ಬೇಕು !!**

★★★



# ಪ್ಲಾಸ್ಮಾ ಟೀವಿ ಪ್ರಕರಣ

**- ವತ್ಸನ**

**ನ**ಮ್ಮ ರಾಯಲ್ ಛಾಲೆಂಜ್ ದಾಂಡಿಗರು ಅತ್ಯಂತ ಶೋಚನೀಯವಾಗಿ ಹೈದರಾಬಾದಿನವರಿಗೆ ಸೋತು ಐಪಿಎಲ್‌ನಿಂದ ಹೊರಬಿದ್ದ ಸಂಜೆ ಅದು. ನಮ್ಮವರು ಸೋತನಂತರ ಟಿ.ವಿ. ಆರಿಸಿ ಮುಂದಿನ ಮ್ಯಾಚನ್ನು ನೋಡುವ ಮನಸ್ಸಿಲ್ಲದೆ ನಮ್ಮ ಮುಂದಿದ್ದ ಕುರುಕಲು ತಿಂಡಿ ತಟ್ಟೆಯಲ್ಲಿ ರಾರಾಜಿಸುತ್ತಿದ್ದ ಎರಡು ಹಸಿರು ಚಕ್ಕುಲಿಗಳನ್ನು ತೆಗೆದು ಒಂದನ್ನು ಶರಲೇಖನಿಗೆ ಕೊಟ್ಟು ಇನ್ನೊಂದನ್ನು ನಾನು ಬಾಯಿಗಿಡಬೇಕು ಅನ್ನೋ ಅಷ್ಟರಲ್ಲಿ ನನ್ನ ಮೊಬೈಲ್ ರಿಂಗಾಯಿತು. ಚಕ್ಕುಲಿಯನ್ನು ಪುನಃ ತಟ್ಟೆಯಲ್ಲಿಟ್ಟು ಮೊಬೈಲನ್ನು ಕಿವಿಗೇರಿಸಿದೆ. ಆಚೆ ಬದಿಯಿಂದ ಶರತ್ ಮಾತನಾಡುತ್ತಿದ್ದ. ಶರತ್ ನನ್ನ ತಂಗಿಯ ಮಗ. ಬಹು ಜಾಣ. ಕೆಲಸದಲ್ಲಿ ಗಟ್ಟಿಗ. ಅಮೆರಿಕೆಯಲ್ಲಿ ಹಣ ಗಳಿಸಿ ಮಗಳ ವಿದ್ಯಾಭ್ಯಾಸಕ್ಕೆಂದು ಬೆಂಗಳೂರಿಗೆ ಬಂದು ನೆಲಸಿದ್ದ. ''ಮಾವ, ನಮ್ಮ ಪುಟ್ಟು ಐ.ಸಿ.ಎಸ್.ಇ.ನಲ್ಲಿ ಹದಿನೈದನೇ ರ್‍ಯಾಂಕ್. ನೀವು ಮತ್ತು ಶರಲೇಖ ಅಂಕಲ್ ನಮ್ಮ ಮನೆಗೆ ನಾಳೆ ಸಂಜೆ ಬಂದು ಮಗೂನ ಹರಸಬೇಕು. ಆರು ಗಂಟೆಗೆಲ್ಲಾ ಕಾರ್ ಕಳಿಸ್ತೇನೆ. ಖಂಡಿತ ಇಬ್ಬರೂ ಬನ್ನಿ'' ಅಂತ ವಿನಂತಿಸಿಕೊಂಡ ಶರತ್. ತಂಗಿ ಮಗ, ಬರಕ್ಕಾಗುಲ್ಲ ಅನ್ನಕ್ಕಾಗುತ್ತದೆಯೇ? ''ನಾನೇನೋ ಬಿಡುವಾಗಿದ್ದೀನಿ. ಶರಲೇಖನ್ನ ನೀನೇ ಕರಿ'' ಅಂತ ಹೇಳಿ ಮೊಬೈಲನ್ನು ಶರಲೇಖನಿಗೆ ವರ್ಗಾಯಿಸಿದೆ. ಶರಲೇಖನ ಮಾತು ಬಹು ಕಡಿಮೆ. ಶರತ್‌ನ ಮಾತನ್ನೆಲ್ಲಾ ಕೇಳಿಸಿಕೊಂಡು ''ಬರ್ತೀನಿ'' ಎಂದಷ್ಟೇ ಹೇಳಿ ಫೋನನ್ನು ನನಗೆ ಹಿಂತಿರುಗಿಸಿದ. ನಾನು ಒಂದೆರಡು ಲೋಕಾಭಿರಾಮವಾದ ಮಾತುಗಳನ್ನು ಆಡಿ ಸಂಭಾಷಣೆ ಮುಗಿಸಿದೆ.

ಶರಲೇಖ, ''ಯಾರಿದು ಶರತ್? ಪುಟ್ಟು ಅಂದರೆ ಯಾರು?'' ಅಂತ ಕೇಳಿದ. ''ನನ್ನ ತಂಗಿ ಮಗ ಶರತ್. ಜಿ. ಕಡೂರ್. ಸಿಸ್ಕೋದಲ್ಲಿ ಸಿಇಓ ಆಗಿದ್ದ ಈಗ ತನ್ನದೇ ಕಂಪನಿ ನಡೆಸ್ತಾ ಇದ್ದಾನೆ. ಅವನ ಹೆಂಡತಿ ರೇಷ್ಮಾ. ಜರ್ನಲಿಸ್ಟ್. ಅವರಿಗೆ ಒಬ್ಬಳೇ ಮಗಳು ಹಂಸಿಕಾ ಅಂತ. ಶರತ್ ಹೇಳಿದಂತೆ ಅವಳು ಐ.ಸಿ.ಎಸ್.ಇ.ನಲ್ಲಿ ಚೆನ್ನಾಗಿ ಪಾಸ್ ಮಾಡಿದ್ದಾಳೆ ಅಂತ ನಾಳೆ ಸಂಜೆ ಅವರ ಮನೆಯಲ್ಲಿ ಸಂತೋಷಕೂಟ. ಅದಕ್ಕೇ ನೀನು ಬರ್ತೀನಿ ಅಂತ ಒಪ್ಪಿಕೊಂಡಿರೋದು'' ಅಂತ ನಿಖರವಾದ, ಸ್ಪಷ್ಟವಾದ ಉತ್ತರ ಕೊಟ್ಟೆ. ನನ್ನ ಗೆಳೆಯನಿಗೆ

ಅಂತಹ ಉತ್ತರಗಳೆಂದರೆ ತುಂಬಾ ಇಷ್ಟ ''ನೋಡಪ್ಪ ಇದು ಉತ್ತರ ಅಂದ್ರೆ. ಈಗ ನಿರಾಳವಾಗಿ ಬೇರೆ ಮಾತನಾಡಬಹುದು. ಎಲ್ಲರಿಗೂ ನಿನ್ನ ತರಹ ಮಾತನಾಡಕ್ಕೆ ಯಾಕೆ ಬರುಲ್ವೋ'' ಅಂತ ಹೇಳುತ್ತಾ ಶರಲೇಖ ತನ್ನ ಕೊಳಲು ಅಭ್ಯಾಸಕ್ಕೆ ಅಂತ ಎದ್ದು ಹೊರಟ. ನಾನು ಹಸಿರು ಚಕ್ಕುಲಿಗೆ ಕೈ ಹಾಕಿದೆ.

ಮಾರನೆಯ ಸಂಜೆ ನಾವು ಶರತ್‌ನ ಮನೆ ಸೇರಿದಾಗ ಗಂಟೆ ಏಳಾಗಿತ್ತು. ಅವರಿದ್ದದ್ದು ಒಂದು ಗೇಟೆಡ್ ಕಮ್ಯೂನಿಟಿ. ಎಂತದೋ ಪರ್ಲ್ ರಿನೇಸಾನ್ಸ್ ಅಂತೆ. ಎಲೆಕ್ಟ್ರಾನಿಕ್ ಸಿಟಿ ದಾಟಿ ಮುಂದೆ ಹೋದರೆ ನಾಲ್ಕು ದೈತ್ಯಾಕಾರದ ಟವರ್‌ಗಳು ಕಣ್ಣಿಗೆ ಬೀಳುತ್ತವೆ. ಶರತ್‌ನ ಫ್ಲಾಟ್ ಹನ್ನೊಂದನೇ ಅಂತಸ್ತಿನಲ್ಲಿ. ದಂಪತಿಗಳು ನಮ್ಮನ್ನು ಬಹು ಆತ್ಮೀಯತೆಯಿಂದ ಸ್ವಾಗತಿಸಿದರು. ಪುಟ್ಟು ಬಂದು ನಮ್ಮಿಬ್ಬರಿಗೂ ಕಾಲು ಮುಟ್ಟಿ ನಮಸ್ಕಾರ ಮಾಡಿತು. ಪರವಾಗಿಲ್ಲ, ಗೇಟೆಡ್ ಭವನದಲ್ಲಿದ್ದರೂ ನಮ್ಮ ಸಂಸ್ಕೃತಿಯ ಗಂಧ ಇದೆ ಅಂದುಕೊಂಡೆ. ಮನೆ ವಿಶಾಲವಾಗಿತ್ತು. ಅಪ್‌ಮಾರ್ಕೆಟ್ ಮನೆಯನ್ನ ರೇಷ್ಮಾ ಬಹು ವಿಚಕ್ಷಣೆಯಿಂದ ಸಿಂಗರಿಸಿದ್ದಳು. ವಿಶಾಲವಾದ ಹಾಲಿನಲ್ಲಿ ಹಂಸಿಕಾಳ ಐದಾರು ಗೆಳತಿಯರು ಕಾರಣವಿಲ್ಲದೇ ಕಿಲಕಿಲ ನಗುತ್ತಾ ಮನೆಗೆ ಸಂಭ್ರಮ ತಂದಿದ್ದರು. ಶರತ್ ಮಕ್ಕಳನ್ನು ಕುರಿತು ''ಇವರು ನಮ್ಮ ಮಾವ ವತ್ಸನ ಅಂತ. ಅವರೊಂದಿಗೆ ಬಂದಿರುವವರು ಶರಲೇಖ ಅಂತ. ಬಹು ಖ್ಯಾತ ಡಿಟೆಕ್ಟಿವ್'' ಎಂದು ಪರಿಚಯಿಸಿದ. ಹಂಸಿಕಾ ಥಟ್ಟನೆ ''ವಾವ್, ಎ ಲಿವಿಂಗ್ ಡಿಟೆಕ್ಟಿವ್. ನಾನು ಬುಕ್ಸ್ ನಲ್ಲಿ ಮಾತ್ರ ಓದಿದ್ದೆ. ಶರಲೇಖ ಅಂಕಲ್, ಡಿಟೆಕ್ಟಿವ್ ಅಂದರೆ ಏನು ಕೆಲಸ ಅಂತ ಸ್ವಲ್ಪ ಬಿಡಿಸಿ ಹೇಳ್ತೀರಾ?'' ಅಂತ ಕೇಳಿದಳು.

ಶರಲೇಖ ನಸು ನಕ್ಕ. ''ಏನು ಕೆಲಸ ಅಂತ ವಿವರಿಸೋದು ಕಷ್ಟ. ಅದಕ್ಕೆ ಬದಲು ಒಂದು ಡಿಮೋ ಮಾಡಿ ತೋರಿಸ್ತೇನೆ ಆಗಬಹುದಾ?'' ಅಂತ ಕೇಳಿದ. ಹುಡುಗಿಯರ ಸಮೂಹ ''ಫೆನ್ಟಾಸ್ಟಿಕ್'' ಅಂತ ತಾರಕ ಸ್ವರದಲ್ಲಿ ಕೂಗಿ ತನ್ನ ಒಪ್ಪಿಗೆ ಸೂಚಿಸಿತು. ಶರಲೇಖ ಹಂಸಿಕಾಳ ಇಬ್ಬರು ಗೆಳತಿಯರನ್ನು ಮುಂದಕ್ಕೆ ಕರೆದು, ''ಬಲಗಡೆ ಇರುವವಳು ಕೌಸಲ್ಯಾ. ನಿನ್ನ ಫೇವರೆಟ್ ನಟ ಶಾರುಕ್ ಖಾನ್, ನಿನಗೆ ಹಿಂದೂಸ್ಥಾನಿ ಸಂಗೀತ ಪಾಠ ನಡೆಯುತ್ತಾ ಇದೆ. ನಿನ್ನ ಅತ್ಯಂತ ಪ್ರಿಯವಾದ ಓದಿನ ವಿಷಯ ಎಂದರೆ ಚರಿತ್ರೆ. ನಿಮ್ಮಪ್ಪ ನಿನಗೆ ಮೊನ್ನೆ ತಾನೆ ಸ್ಕೂಟಿ ಖರೀದಿಸಿ ಕೊಟ್ಟರು. ಇನ್ನು ಎಡಗಡೆ ಹುಡುಗಿ ಗೌರಿ. ನಿನಗೆ ವಿಜ್ಞಾನ ಅಂದರೆ ಬಹು ಇಷ್ಟ ಗಣಿತದಲ್ಲಿ ಯಾವಾಗಲೂ ಅತಿ ಹೆಚ್ಚು ಅಂಕಗಳು ನಿನಗೆ. ಅಮಿರ್ ಖಾನ್ ನಿನ್ನ ಫೇವರೆಟ್ ಬಾಲಿವುಡ್ ನಟ. ಹಸಿರು ನಿನ್ನ ಇಷ್ಟದ ಬಣ್ಣ. ಕಳೆದ ತಿಂಗಳು ನೀನು ನಿನ್ನ ಮನೆಯವರೆಲ್ಲರ ಜೊತೆ ಕೂನೂರಿಗೆ ಹೋಗಿದ್ದೆ.'' ಅಂತ ಹೇಳಿ ಸುಮ್ಮನಾದ. ಅಲ್ಲಿ ನೆರೆದಿದ್ದ ಎಲ್ಲರೂ ''ಡಂಗ್'' ಆಗಿಹೋದರು. ಮೊದಲು ಚೇತರಿಸಿಕೊಂಡದ್ದು ಶರತ್. ''ಅಂಕಲ್ ನೀವು ಪತ್ತೇದಾರಿ ಕೆಲಸದಲ್ಲಿ ನಿಷ್ಣಾತರು ಅಂತ ಗೊತ್ತಿತ್ತು. ಆದರೂ ಎಂದೂ ನೋಡಿಲ್ಲದ ಇಬ್ಬರು ಹುಡುಗಿಯರನ್ನು ಕರೆದು ಅವರ ಚರಿತ್ರೇನೆಲ್ಲಾ ಕೇವಲ ಅವರ ಮುಖ ನೋಡಿ ಹೇಳಿಬಿಟ್ರಲ್ಲಾ, ನಿಜವಾಗ್ಲೂ ಅದ್ಭುತ. ಅದ್ಭುತ.'' ಅಂತ ಉದ್ಗರಿಸಿದ. ಹಂಸಿಕಾ ಸುಮ್ಮನಿರಲಿಲ್ಲ, ''ಶರಲೇಖ ಅಂಕಲ್, ಅದು ಹೇಗೆ ಕೌಸಲ್ಯಾ ಮತ್ತು ಗೌರಿ ವಿಷಯಾನ

ಅಷ್ಟು ನಿಖರವಾಗಿ ಹೇಳಿದ್ರಿ ತಿಳಿಸಲೇಬೇಕು'' ಅಂತ ಪಟ್ಟು ಹಿಡಿದಳು. ಶರಲೇಖ ಜೋರಾಗಿ ನಕ್ಕು, ''ಈಗ ಇಷ್ಟು ಅದ್ಭುತವಾಗಿ ಕಾಣುತ್ತಲ್ಲ. ಕಾರಣ ತಿಳಿಸಿದರೆ ಅಯ್ಯೋ ಇಷ್ಟೇನೇ ಅಂತ ಹೇಳ್ತೀರ'' ಅಂದ. ಹಂಸಿಕಾ ಮತ್ತು ಗೆಳೆತಿಯರು ''ಖಂಡಿತಾ ಇಲ್ಲ. ಹಾಗೆ ಹೇಳೋಲ್ಲ'' ಎಂದ ಮೇಲೆ ಶರಲೇಖ ತನ್ನ ವಿವರಣೆ ಪ್ರಾರಂಭಿಸಿದ.

''ನಿನ್ನೆ ಶರತ್ ನನಗೆ ಆಹ್ವಾನ ನೀಡಿದ ನಂತರ ನನ್ನ ಕೊಳಲು ಅಭ್ಯಾಸಕ್ಕೆ ತೊಡಗಿದೆ. ಅನಂತರ ಇವತ್ತಿನ ಪಾರ್ಟಿಯಲ್ಲಿ ನೆರೆದಿರುವ ಮಕ್ಕಳು ನನ್ನ ವೃತ್ತಿಯ ಬಗ್ಗೆ ಕುತೂಹಲ ತೋರಿಸಬಹುದು ಅಂತ ಹೊಳೀತು. ಇವರಿಗೆ ಪತ್ತೇದಾರಿ ವಿಷಯಾನ ಮನದಟ್ಟೋ ಹಾಗೆ ಹೇಳಬೇಕಾದರೆ ಒಂದು ಡಿಮೋ ಅಗತ್ಯ ಅಂದುಕೊಂಡು ಫೇಸ್‌ಬುಕ್‌ಗೆ ಹೋಗಿ ನನ್ನ ಅಕೌಂಟ್‌ನಿಂದ ಹಂಸಿಕಾ ಕಡೂರ್ ಒತ್ತಿದೆ. ಅವಳ ಪುಟ ತೆರೆದುಕೊಂಡಿತು. ಅದರಲ್ಲಿ ಅವಳ ನೆಚ್ಚಿನ ಗೆಳೆತಿಯರ ಹೆಸರೆಲ್ಲಾ ಇತ್ತು ಒಬ್ಬೊಬ್ಬರ ಪುಟವನ್ನೂ ತೆಗೆದು ಅವರ ಮುಖ ಪರಿಚಯ, ಹಲವು ಮಾಹಿತಿ ಇವುಗಳನ್ನು ಕಲೆ ಹಾಕಿದೆ. ಎಂಟು ಹತ್ತು ಗೆಳತಿಯರ ನಿಕಟ ಪರಿಚಯ ಆಯಿತು. ಸ್ಯಾಂಪಲ್‌ಗೆ ಅಂತ ಕೌಸಲ್ಯಾ ಮತ್ತು ಗೌರಿ ಇವರನ್ನ ಕರೆದೆ. ಅಂದಹಾಗೆ ಶಿರೀನ್ ಯಾಕೆ ಬರಲಿಲ್ಲ. ಅವಳ ಕೆಮ್ಮು ಇನ್ನೂ ವಾಸಿಯಾಗಿಲ್ಲವೇನು?'' ಅಂತ ನಗುತ್ತಾ ಕೇಳಿದ ಶರಲೇಖ. ''ಅಯ್ಯೋ ಇಷ್ಟೇನೆ?'' ಅಂತ ಎಲ್ಲ ಹುಡುಗಿಯರೂ ಒಕ್ಕೊರಲಿನಿಂದ ಕೂಗಿದರು.

ಶರತ್ ಮತ್ತು ರೇಷ್ಮಾ ಮಕ್ಕಳನ್ನು ಮಾತನಾಡಿಕೊಳ್ಳಲು ಬಿಟ್ಟು ನಮ್ಮಿಬ್ಬರನ್ನು ಅವರ ಗೇಟೆಡ್ ಕಮ್ಯೂನಿಟಿಯ ಕ್ಲಬ್ ಹೌಸ್‌ಗೆ ಕರೆದುಕೊಂಡು ಹೋದರು. ರೇಷ್ಮಾಗೆ ಶರಲೇಖ ಮಕ್ಕಳ ಮೇಲೆ ಮಾಡಿದ ಟ್ರಿಕ್ ಇನ್ನೂ ನಗೆ ತರಿಸುತ್ತಿತ್ತು. ''ಅಂಕಲ್ ಪತ್ತೇದಾರಿ ಅಂದರೆ ಇಷ್ಟು ಸುಲಭ ಅಲ್ಲ ಅಲ್ಲವೇ?'' ಅಂತ ಶರಲೇಖನನ್ನ ಕೇಳಿದಳು. ''ಸುಲಭ ಕಷ್ಟ ಅಂತ ಅಲ್ಲ. ಶ್ರದ್ಧೆ, ತರ್ಕ, ಇನ್‌ಟ್ಯೂಷನ್ ಎಲ್ಲಾ ಸೇರಿದ ಕಾಯಕ ಅದು'' ಎಂದ ಶರಲೇಖ. ಶರತ್ ಒಮ್ಮೆಲೇ ''ಅಂಕಲ್ ನಮ್ಮದೊಂದು ಪುಟ್ಟ ಸಮಸ್ಯೆ ಇದೆ. ನಿಜವಾಗಿ ನೋಡಿದರೆ ಅದು ನೀವು ಪರಿಹರಿಸುವಂತಹ ಸಮಸ್ಯೇನೇ ಅಲ್ಲ. ಏಕೆಂದರೆ ಅದು ಇಲೆಕ್ಟ್ರಾನಿಕ್ಸ್‌ಗೆ ಸಂಬಂಧಿಸಿದ್ದು. ನಮ್ಮ ಹಾಲ್‌ನಲ್ಲಿ ನಲವತ್ತು ಇಂಚಿನ ಪ್ಲಾಸ್ಮಾ ಟಿ.ವಿ. ಇದೆ ನೋಡಿದ್ರಾ?'' ಅಂತ ಶರತ್ ಕೇಳಿದ. ''ನೋಡುವುದು ನನ್ನ ಕಸುಬು. ಟಿ.ವಿ.ಗೆ ಪವರ್ ಸಪ್ಲೈ ಮಾಡುವ ಮೇನ್ ಸ್ವಿಚ್ ಆಫ್ ಆಗಿದ್ದನ್ನೂ ನೋಡಿದೆ. ಯಾಕೆ ನೀವು ಸಾಧಾರಣವಾಗಿ ಟಿ.ವಿ. ನೋಡಲ್ಲವೇ. ಮೇನ್ ಸ್ವಿಚ್ ಯಾಕೆ ಆಫ್ ಮಾಡಿದ್ದೀರಿ?'' ಅಂತ ಶರಲೇಖ ಕೇಳಿದ. ಗಂಡ ಹೆಂಡತಿ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ''ಬಹು ಸೂಕ್ಷ್ಮ ನಿಮ್ಮ ಕಣ್ಣು. ಅದೇ ನಮ್ಮ ಸಮಸ್ಯೆ. ಮೂರು ತಿಂಗಳ ಹಿಂದೆ ಈ ಪ್ಲಾಸ್ಮಾ ಟಿ.ವಿ. ಕೊಂಡೆವು. ತೊಗೊಂಡಾಗಿನಿಂದ ಸರಿರಾತ್ರಿ ಹನ್ನೆರಡೂವರೆಗೆ ಸರಿಯಾಗಿ ಟಿ.ವಿ. ತಾನೇ ತಾನಾಗಿ ಸ್ವಿಚ್ ಆನ್ ಆಗಿ ಕೊನೆಯಲ್ಲಿ ಹಾಕಿದ್ದ ಛಾನೆಲ್ ಅರಚಿಕೊಳ್ಳೋಕ್ಕೆ ಪ್ರಾರಂಭಿಸುತ್ತೆ. ಮೊದಲ ಬಾರಿ ಹೀಗಾದಾಗ ಸ್ವಲ್ಪ ದಿಗಿಲೇ ಆಯಿತು. ಆಮೇಲೆ ಟಿ.ವಿ. ಡೀಲರ್ ತನ್ನ ತಂತ್ರಜ್ಞರನ್ನೆಲ್ಲಾ ಕಳಿಸಿದ. ಅವರು ಎಲ್ಲವನ್ನೂ ಪರಿಶೀಲಿಸಿ ಏನೂ ದೋಷವಿಲ್ಲ ಅಂತ ನಿರ್ಧರಿಸಿದರು. ಆದರೆ ಮಾರನೆಯ ರಾತ್ರಿ ಪುನಃ

ಅದೇ ಕಥೆ. ಬೇರೆ ಮಾರ್ಗ ಇಲ್ಲ ಅಂತ ಈಗ ಮೇನ್ ಸ್ವಿಚ್‌ನ ಆಫ್‌ನಲ್ಲಿ ಇಡುಕ್ಕೆ ಪ್ರಾರಂಭಿಸಿದ್ದೇವೆ. ಬೇಕಾದಾಗ ಮಾತ್ರ ಆನ್ ಮಾಡಿಕೊಂಡು ಟಿ.ವಿ. ನೋಡುತ್ತೇವೆ. ಒಳ್ಳೇ ಫಜೀತಿ ಆಗಿಬಿಟ್ಟಿದೆ. ಆದರೆ ಇದು ಪತ್ತೇದಾರಿ ಮಾಡಿ ಪರಿಹರಿಸಬಹುದಾದ ಸಮಸ್ಯೆ ಅಲ್ಲ ಅಲ್ಲವೇ?'' ಅಂತ ಕೇಳಿದ ಶರತ್. ಶರಲೇಖ ಸ್ವಲ್ಪ ಸಮಯ ಏನೂ ಮಾತನಾಡಲಿಲ್ಲ. ಆಮೇಲೆ, ''ನಿಮ್ಮ ಟಿ.ವಿ. ಸೆಟ್ಟಿನ ಮೇಕ್, ಮಾಡೆಲ್, ಡೀಲರ್ ವಿವರ ಎಲ್ಲ ಕೊಡಿ. ವಿಚಾರಿಸಿ ಏನಾದರೂ ಪರಿಹಾರ ಕಾಣುವಂತಾದರೆ ನಿಮ್ಮನ್ನ ಸಂಪರ್ಕಿಸುತ್ತೇನೆ'' ಎಂದ. ಸಂಜೆಯ ಊಟ ಮುಗಿಸಿ ಅಲ್ಲಿಂದ ಹೊರಟೆವು. ಶರತ್ ಬಹು ಸೌಜನ್ಯದಿಂದ ನಮ್ಮನ್ನು ತನ್ನ ಕಾರಿನಲ್ಲೇ ಕಳಿಸಿದ.

ಆ ವಾರವೆಲ್ಲಾ ಶರಲೇಖ ಬಹಳ ಗಡಿಬಿಡಿಯಲ್ಲಿದ್ದ. ಕೊನೆಗೆ ಒಂದು ದಿನ ''ನಿನ್ನ ತಂಗಿಯ ಮಗನಿಗೆ ಫೋನ್ ಮಾಡು. ಇವತ್ತು ರಾತ್ರಿ ಹನ್ನೆರಡಕ್ಕೆ ಅವರ ಮನೆಗೆ ಬರುತ್ತೇವೆ ಅಂತ ಹೇಳು'' ಅಂತ ಆಜ್ಞಾಪಿಸಿದ. ಆಶ್ಚರ್ಯ ಮಿಶ್ರಿತ ಸಂತಸದಿಂದ ಶರತ್ ಮತ್ತು ರೇಷ್ಮಾ ನಮ್ಮನ್ನು ಸ್ವಾಗತಿಸಿದರು. ಕಲ್ಲು ಕರಗುವ ಸಮಯ. ರಾತ್ರಿ ಹನ್ನೆರಡು ಹೊಡೆದಿತ್ತು. ಶರಲೇಖ ನೇರವಾಗಿ ಟಿ.ವಿ. ಹತ್ತಿರ ಹೋಗಿ ಮೇನ್ ಸ್ವಿಚ್ ಆನ್ ಮಾಡಿದ. ಟಿ.ವಿ. ಸ್ಟಾಂಡ್ ಬೈ ಮೋಡಿಗೆ ಬಂದದ್ದು ಅದರ ಮುಂದಿನ ಕೆಂಪುದೀಪದಿಂದ ಕಂಡಿತು. ಅನಂತರ ಶರಲೇಖ ತನ್ನ ಬ್ರೀಫ್‌ಕೇಸಿನಿಂದ ಒಂದು ಪುಟ್ಟ ಪೆಟ್ಟಿಗೆಯನ್ನು ತೆಗೆದು ಟಿ.ವಿ.ಯ ಮೇಲಿಟ್ಟು ಅದನ್ನು ಟಿ.ವಿ.ಗೆ ತಂತಿಯ ಮೂಲಕ ಸಂಪರ್ಕಿಸಿದ. ಆ ಪೆಟ್ಟಿಗೆ ಸೆಟ್ ಟಾಪ್ ಬಾಕ್ಸನ್ನು ಹೋಲುತ್ತಿತ್ತು. ಆದರೆ ಮುಂದೆ ಪುಟ್ಟ ಬಣ್ಣದ ದೀಪಗಳ ಬದಲು ಒಂದು ಮೀಟರ್ ಇತ್ತು ಅಷ್ಟೆ. ''ನಮ್ಮ ಮುಂದಿನ ಕೆಲಸ ಸುಮಹೂರ್ತಕ್ಕೆ ಕಾಯುವುದು ಅಷ್ಟೆ'' ಎನ್ನುತ್ತಾ ಶರಲೇಖ ಸೋಫಾದ ಮೇಲೆ ಕುಳಿತು ಕಾಲು ಚಾಚಿದ.

ಹನ್ನೆರಡೂವರೆಗೆ ಸರಿಯಾಗಿ ಶರಲೇಖನ ಪೆಟ್ಟಿಗೆಯ ಮುಂದಿನ ಮೀಟರ್‌ನ ಮುಳ್ಳು ಸ್ವಲ್ಪ ಚಲಿಸಿ ನಿಂತಿತು. ಟಿ.ವಿ. ತಣ್ಣಗೆ ಸ್ಟಾಂಡ್ ಬೈ ಮೋಡ್‌ನಲ್ಲೇ ಕುಳಿತಿತ್ತು. ಶರಲೇಖ ಒಮ್ಮೆಲೇ ''ಯುರೇಕಾ'' ಅಂತ ಕೂಗಿದ. ಅನಂತರ ಶರತ್‌ನ ಕಡೆ ತಿರುಗಿ ''ಇನ್ನು ಮುಂದೆ ನೀವು ಮೇನ್ ಸ್ವಿಚ್ ಆರಿಸಬೇಕಾಗಿಲ್ಲ'' ಅಂತ ಸಂತಸದಿಂದ ಹೇಳಿದ. ರೇಷ್ಮಾ ''ಏನು ಮಾಡಿದಿರಿ? ಆ ಬಾಕ್ಸ್‌ನ ಉದ್ದೇಶ ಏನು ಹೇಳಿರಲ್ಲಾ'' ಅಂತ ಕೇಳಿಕೊಂಡಳು. ಶರಲೇಖ ಒಂದು ಮರು ಪ್ರಶ್ನೆ ಹಾಕಿದ. ''ಎಲೆಕ್ಟ್ರಾನಿಕ್ ಮಾಲಿನ್ಯ ಅನ್ನೋ ಪದ ಕೇಳಿದ್ದೀರಾ?'' ರೇಷ್ಮಾ ಇಲ್ಲ ಎಂಬ ರೀತಿಯಲ್ಲಿ ತಲೆ ಆಡಿಸಿದಳು. ಶರಲೇಖ ಮುಂದುವರಿಸಿದ. ''ಪರಿಸರ ಮಾಲಿನ್ಯ ಅಂದರೆ ಬಹುತೇಕ ಜನ ವಾಯುಮಾಲಿನ್ಯ, ಗ್ಲೋಬಲ್ ವಾರ್ಮಿಂಗ್ ಅಥವಾ ಜಲಮಾಲಿನ್ಯ ಅಂತ ತಿಳಿದಿರ್ತಾರೆ. ಆದರೆ ಈ ನಡುವೆ ದೊಡ್ಡ ಪಟ್ಟಣಗಳಲ್ಲಿ ಶುರು ಆಗ್ತಾ ಇರೋ ಪಿಡುಗು ಅಂದರೆ ಎಲೆಕ್ಟ್ರಾನಿಕ್ ಮಾಲಿನ್ಯ. ಈಗ ನಿಮ್ಮ ಗೇಟೆಡ್ ಕಮ್ಯೂನಿಟೀನೇ ತಗೊಳ್ಳಿ. ಎಲೆಕ್ಟ್ರಾನಿಕ್ ಸಿಟಿ ನಿಮ್ಮ ಮುಂದಿನ ರಸ್ತೇಲೇ ಇದೆ. ನಿಮ್ಮ ನಾಲ್ಕು ದೈತ್ಯ ಟವರುಗಳ ಮೇಲೆ ಮೊಬೈಲ್ ಪ್ರಸರಣ ಗೋಪುರಗಳು ಶಿಖರಪ್ರಾಯವಾಗಿ ನಿಂತಿವೆ. ಟಿ.ವಿ. ಸ್ವಯಂ ಚಾಲಿತವಾಗಿ ಆನ್ ಆಗುತ್ತೆ ಅಂತ ಶರತ್ ಹೇಳಿದಾಗ ನನಗೆ ಇದು ಎಲೆಕ್ಟ್ರಾನಿಕ್

ಮಾಲಿನ್ಯದಿಂದ ಆಗಿರಬಹುದೇ ಅಂತ ಗುಮಾನಿ ಬಂತು. ಇಲ್ಲಿಂದ ಹೋದ ಮೇಲೆ ನನ್ನ ಕಿರಿಯ ಗೆಳೆಯನೊಬ್ಬನ ಸಹಾಯ ಪಡೆದೆ. ಆತ ಇದರಲ್ಲೆಲ್ಲಾ ಬಹು ಜಾಣ. ನನ್ನೊಂದಿಗೆ ಇಲ್ಲಿಗೆ ಬಂದು, ಒಂದು ಅತಿ ಮುಖ್ಯವಾದ ವಿಷಯಾನ ಗುರುತಿಸಿದ. ಎರಡು ಖ್ಯಾತ ಸಾಫ್ಟ್‌ವೇರ್ ಕಂಪನಿಗಳು ತಮ್ಮ ಟ್ರಾನ್ಸ್ಮಿಷನ್ ಟವರುಗಳನ್ನು ನಿಮ್ಮ ಟವರಿನ ಹಿಂಭಾಗದಲ್ಲೇ ನಿರ್ಮಿಸಿವೆ ಅಂತ ಅವನು ಕಂಡುಹಿಡಿದ. ಎರಡೂ ಕಂಪನಿಗಳ ಎಲೆಕ್ಟ್ರಾನ್ ಕಿರಣಗುಚ್ಛಗಳು ಒಂದನ್ನೊಂದು ಕತ್ತರಿಸುವ ಬಿಂದುವಿನಲ್ಲೇ ನಿಮ್ಮ ಟಿ.ವಿ. ಕುಳಿತಿರುವುದು ನಿಮ್ಮ ದುರದೃಷ್ಟ. ಈ ಕಂಪನಿಗಳ ವ್ಯವಹಾರವೆಲ್ಲಾ ಅಮೆರಿಕಾದೊಂದಿಗೆ. ಇಲ್ಲಿ ರಾತ್ರಿ ಹನ್ನೆರಡೂವರೆ ಆದಾಗಲೇ ಅಮೆರಿಕಾದಲ್ಲಿ ಕೆಲಸ ಪ್ರಾರಂಭ. ಆ ಶಕ್ತಿಯುತ ಕಿರಣಗುಚ್ಛಗಳು ನಿಮ್ಮ ಟಿ.ವಿ.ಯ ಬಹು ಸೂಕ್ಷ್ಮ ರಿಮೋಟ್ ಸ್ವಿಚ್ ಅನ್ನು ಚಾಲನೆಗೊಳಿಸುವ ಸಾಮರ್ಥ್ಯ ಹೊಂದಿರುವುದರಿಂದ ಸಹಜವಾಗಿಯೇ ನಿಮ್ಮ ಟಿ.ವಿ. ಆನ್ ಆಗುತ್ತಿತ್ತು. ಇದಕ್ಕೇನು ಪರಿಹಾರ ಅಂತ ನನ್ನ ಗೆಳೆಯನನ್ನೇ ಕೇಳಿದೆ. ಅವನು ಈ ಬಾಕ್ಸ್‌ನ ಮಾಡಿಕೊಟ್ಟ. ಇದರಲ್ಲಿ ಟಿ.ವಿ.ಯ ಸೂಕ್ಷ್ಮ ಸ್ವಿಚ್‌ನಂತೆಯೇ ಇರುವ ಸ್ವಿಚ್ ಇದೆ. ಆದರೆ ಇದರ ರೆಸಿಸ್ಟೆನ್ಸ್ ನಿಮ್ಮ ಟಿ.ವಿ.ಯ ಸ್ವಿಚ್‌ಗಿಂತ ಕಡಿಮೆ ಇರುವುದರಿಂದ ಇದು ಮೊದಲು ಆ ಕಿರಣಗುಚ್ಛದ ಶಕ್ತಿಯನ್ನೆಲ್ಲಾ ಹೀರಿ ಟಿ.ವಿ. ಆನ್ ಆಗದೇ ಇರುವಂತೆ ಮಾಡುತ್ತದೆ'' ಅಂದ ಶರಲೇಖ.

''ಸಧ್ಯ, ಇನ್ನು ನಾವು ಹಾಯಾಗಿರಬಹುದು'' ಅಂತ ರೇಷ್ಮಾ ಉದ್ಗರಿಸಿದಳು. ''ಹಾಗೆ ತಿಳಿಯ ಬೇಡಿ ರೇಷ್ಮಾ, ಮನುಷ್ಯನ ಮಿದುಳೂ ಕೂಡ ಇಲೆಕ್ಟ್ರಾನಿಕ್ ಸಂಕೇತಗಳಿಂದಲೇ ಕೆಲಸ ಮಾಡೋದು. ಈ ರಿಮೋಟ್ ಸ್ವಿಚ್ ಮೇಲೆಯೇ ಇಷ್ಟು ಪ್ರಭಾವ ಬೀರುವ ಇಲೆಕ್ಟ್ರಾನಿಕ್ ಕಿರಣ ಗುಚ್ಛ ನಿಮ್ಮೆಲ್ಲರ ಬಡಪಾಯಿ ಮಿದುಳುಗಳ ಮೇಲೆ ಬೀರಬಲ್ಲ ಪ್ರಭಾವದ ಬಗ್ಗೆ ಸ್ವಲ್ಪ ಯೋಚಿಸಿ'' ಅಂದ ಶರಲೇಖ. ರೇಷ್ಮಾ ಗಾಬರಿಯಾಗುವ ಮುಂಚೆಯೇ ಶರತ್ ಬಾಯಿಹಾಕಿದ. ''ಬಿಡಿ ಶರಲೇಖ ಅವರೇ, ಎಲ್ಲರಿಗೂ ಆಗೋದು ನಮಗೂ ಆಗುತ್ತೆ. ಈಗಾಗಲೇ ಒಂದು ಗಂಟೆ ಆಗಿದೆ. ಇನ್ನು ಈ ಸರಿಹೊತ್ತಿನಲ್ಲಿ ಬನಶಂಕರಿಗೆ ಯಾಕೆ ಹೋಗ್ತೀರಾ. ನಮ್ಮ ಗೆಸ್ಟ್ ರೂಮಿನಲ್ಲೇ ಆರಾಮವಾಗಿ ಇದ್ದುಬಿಡಿ. ಬೆಳಗ್ಗೆ ಮಸಾಲೆ ದೋಸೆ ಮಾಡಿಸ್ತೀನಿ. ತಿಂದು ಹೋಗುವಿರಂತೆ'' ಅಂದ ಸೌಜನ್ಯಶೀಲ ಶರತ್. ನಾವಿಬ್ಬರೂ ಕೋಲೇಬಸವನಂತೆ ತಲೆ ಆಡಿಸಿದೆವು. ಗಾಡ್‌ಫಾದರ್ ಮೂವಿಯಲ್ಲಿ ಡಾನ್ ಹೇಳಿದಂತೆ ''It was an offer we could not refuse''!!

---

**ನಕ್ಕುಬಿಡಿ**

ನಗುವುದಾದರೆ ಈಗಲೆ ನಕ್ಕುಬಿಡಿ
ಇಲ್ಲದಿದ್ದರೆ ಇದ್ದಲ್ಲಿಯೇ ಸುಮ್ಮನಿದ್ದುಬಿಡಿ
ನೀವು ನಕ್ಕರೆ ಎಲ್ಲರೂ ನಗುವರು ಜೊತೆಗೂಡಿ
ನೀವು ಅತ್ತರೆ ಯಾರೂ ಅಳುವುದಿಲ್ಲ ನೋಡಿ

# ವಿಶ್ವ ಪೊರಕೆ ದಿನಾಚರಣೆ

– ಸಿ.ಆರ್. ಸತ್ಯ

**ಹೆಂ**ಡ್ತೀರ ಜಗಳದಲ್ಲಿ ಗಂಡಂದಿರು ಬಡವಾದ್ರು ಅಂತ ಗಾದೆ ಕೇಳಿದೀರಾ?

ಜೂನ್ ತಿಂಗಳು ಬಂದರೆ ನನಗೆ ಮತ್ತು ನಮ್ಮ ಬಡಾವಣೆಯ ಕೆಲವು ಗಂಡಸರಿಗೆ ಕಷ್ಟಕಾಲವೇ! ಈ ಸ್ಥಿತಿ ಒಂದು ವರ್ಷದ ಹಿಂದೆ ಉದ್ಭವಿಸಿದ್ದು ನಮ್ಮ ಸಂಕಟ ಇಮ್ಮಡಿಯಾಗುತ್ತಿದೆಯೇ ಹೊರತು, ಕಡಿಮೆಯಂತೂ ಆಗುತ್ತಿಲ್ಲ.

ಇದಕ್ಕೆ ಕಾರಣ? ನನ್ನ ಹೆಂಡ್ತಿ!

ನಮ್ಮ ಬಡಾವಣೆಯ ಮಹಿಳಾ ಸಮಾಜಕ್ಕೆ ನನ್ನ ಹೆಂಡ್ತಿ ಉಪಾಧ್ಯಕ್ಷೆ. ಆಚೆ ರೋಡಿನಲ್ಲಿರೋ ಪ್ರಾವಿಷನ್ ಸ್ಟೋರ್ಸ್ ಮಾಲೀಕ ಹಾಗು ನನ್ನ ಆಪ್ತ ಸ್ನೇಹಿತ ಮಂಜುನಾಥಯ್ಯನ ಹೆಂಡ್ತಿ ಪಾರ್ವತಮ್ಮ ಅಧ್ಯಕ್ಷೆ. ಇದುವರೆವಿಗೂ ತಾನು ಅಧ್ಯಕ್ಷೆಯಾಗೋದಿಕ್ಕೆ ಈಕೆ ಅಡ್ಡ ಬಂದಿದ್ದಾಳಲ್ಲಾ ಅಂತ ನನ್ನ ಹೆಂಡ್ತಿಗೆ ಪಾರ್ವತಮ್ಮನ ಮೇಲೆ ಕಳೆದ ನಾಲ್ಕು ವರ್ಷಗಳಿಂದ ಅಸೂಯೆ ದ್ವೇಷ ಹೆಚ್ಚಾಗಿದೆ. ಆಕೆಯ ಎತ್ತರ ಗಾತ್ರ ನೋಡಿ, ಕೆಲವರು ಪಾರ್ವತಮ್ಮನನ್ನು ಪರ್ವತಮ್ಮ ಎಂತಲೂ ಕರೀತಾರೆ. (ಹೇಗೂ ಮಂಜುನಾಥಯ್ಯ ಅಂದರೆ ಶಿವ ಅಲ್ಲವೆ? ಅವನು ಇರೋದೇ ಕೈಲಾಸ ಪರ್ವತದಲ್ಲಿ). ಅದಕ್ಕೆ ತಕ್ಕ ಹಾಗೆ ಏನಾದರೂ ಆಗಲಿ ನಾನು ಈ ಅಧ್ಯಕ್ಷ ಸ್ಥಾನವನ್ನು ಬಿಡಲ್ಲಾ ಅಂತ ಪಟ್ಟು ಹಿಡಿದು ಪರ್ವತದ ಹಾಗೇ ಕುರ್ಚಿಯಲ್ಲಿ ಕೂತಿದ್ದಾರೆ. ಆದರೆ ಒಂದು ವರ್ಷದ ಹಿಂದೆ ನನ್ನ ಹೆಂಡ್ತಿಗೊಂದು ಅದೃಷ್ಟ ಬಡೀತು. ಅಮೇರಿಕಾದಲ್ಲಿ ಬಾಲ್ಟಿಮೋರ್ನಲ್ಲಿರೋ ಮಗನ ಮನೆಗೆ ಸ್ವಲ್ಪ ತಿಂಗಳುಗಳಿಗಾದರೂ ಹೋಗಿ ಬರ್ತೀವಿ ಅಂತ ಪರ್ವತಮ್ಮನವರೂ ಮಂಜುನಾಥಯ್ಯನವರೂ ಮೇ ತಿಂಗಳಲ್ಲಿ ಹೊರಟೇ ಬಿಟ್ರು. ಸರಿ, ನನ್ನ ಹೆಂಡ್ತಿ acting ಅಧ್ಯಕ್ಷೆ ಆಗೇ ಬಿಟ್ಲು!

ಜೂನ್ 5ನೇ ತಾರೀಖು ವಿಶ್ವಪರಿಸರ ದಿನಾಚರಣೆ. ಆ ದಿನ ಬೆಂಗಳೂರಿಗೆಲ್ಲಾ ಆದರ್ಶಮಯವಾಗಿ ತನ್ನ ಮಹಿಳಾ ಸಮಾಜ ಯಾವುದಾದರೂ ಮಹತ್ಕಾರ್ಯವನ್ನು – ಅದೂ ಪರ್ವತಮ್ಮ ಇಲ್ಲದೇ ಇರುವಾಗ – ಮಾಡಿ ತಾನು ಹೆಸರುಗಳಿಸಬೇಕು ಅಂತ ಯೋಚಿಸಿ, ನನ್ನ ಹೆಂಡ್ತಿ ಅಂದು ಬೆಳಿಗ್ಗೆ ಒಂದು ಭಾರಿ ಸಮಾರಂಭವನ್ನೇ ಏರ್ಪಡಿಸಿದಳು. ಬೆಂಗಳೂರಿನ ಮೇಯರ್ರು, ಲೋಕಲ್ ಎಂ.ಎಲ್.ಎ., ಒಂದೆರಡು ಪರಿಸರ ವಿಜ್ಞಾನಿಗಳನ್ನೂ ಆಹ್ವಾನಿಸಿದಳು. ಅಪರೂಪಕ್ಕೆ ನನ್ನನ್ನೂ ನಮ್ಮ ಬಡಾವಣೆಯ ಇನ್ನೂ 19 ಜನ ಗಂಡಸರನ್ನೂ (ಎಲ್ಲಾ ಮಹಿಳಾ ಸಮಾಜದ ಸದಸ್ಯೆಯರ ಗಂಡಂದಿರೇ!) ಬಹಳ ಆತ್ಮೀಯವಾಗಿ ಸ್ವಾಗತಿಸಿ, ನಗುನಗುತಾ, ಕಾದಿರಿಸಿದ ಇಪ್ಪತ್ತು ಕುರ್ಚಿಗಳಲ್ಲಿ ಸದಸ್ಯೆಯರು ಕೂರಿಸಿದರು. ನನ್ನ ಪಕ್ಕದಲ್ಲೇ ಕೂತ ಗೋವಿಂದಪ್ಪ ನನ್ನ ಕಿವಿಯಲ್ಲಿ "ಅಲ್ರೀ, ನಿಮಗೇನೂ ಇದರಲ್ಲಿ

ಅನುಮಾನ ಬರ್ತಿಲ್ವೆ? ನಮಗೆಲ್ಲಾ ಇವರು ಇಷ್ಟೊಂದು ಗೌರವ, ಪ್ರೀತಿ ಕೊಡ್ತೀರೊದು ನೋಡಿದ್ರೆ ನಿಮ್ಮ ಹೆಂಡ್ತಿದೇನಾದರೂ ಕಿತಾಪತಿ ಇದೆಯೇನೂ?'' ಅಂತ ಕೇಳಿದರು. ನಾನು ''ಗೊತ್ತಿಲ್ಲ'' ಅಂದೆ. ವಾಸ್ತವವಾಗಿ ನನಗೂ ಯಾಕೋ ಹಾಗೇ ಅನುಮಾನ ಬಂದಿತ್ತು. ದಿನ ನಿತ್ಯ ಮನೆಯ ಒಳಗೆ ಮನೆಯ ಹೊರಗೆ ಯಾವಾಗಲೂ ಬಯ್ಯಿಸಿಕೊಂಡು ಬಾಲ ಮುದರಿಕೊಂಡು ಕೂತಿರ್ತಿದ್ದ ನನಗೆ, ಪಬ್ಲಿಕ್ನಲ್ಲೇ ಕುರ್ಚಿ ಹಾಕಿ ಇಷ್ಟೊಂದು ಪ್ರೀತಿಯಿಂದ ಕೂರಿಸ್ತಿದಾಳೆ ಅಂತ ನನ್ನ ಹೆಂಡ್ತಿ ಮೇಲೆ ಗುಮಾನಿ ಬಂತು. ಆದರೆ ಅವಳನ್ನು ಕೇಳೋಕ್ಕೆ ಧೈರ್ಯ ಬೇಡವೆ? ಸುಮ್ಮನಾಗಿದ್ದೆ. ಅಷ್ಟರಲ್ಲಿ ಕಾರ್ಯಕ್ರಮ ಶುರುವಾಯ್ತು.

ಸರಿ, ಮೇಯರ್ರು, ಎಂ.ಎಲ್.ಎ. ಎಲ್ಲರೂ ಪರಿಸರ ಪ್ರಜ್ಞೆ ಬಗ್ಗೆ ತೋಚಿದ್ದೆಲ್ಲಾ ಹೇಳಿ, ನಮ್ಮ ಬೆಂಗಳೂರನ್ನು ಸಿಂಗಪೂರ್ ಸ್ವಿಡ್ಸರ್‌ಲೆಂಡ್ಗೆಲ್ಲಾ ಹೋಲಿಸಿ, ಯಾವಾಗ ಇಲ್ಲೂನೂ ಅಂತಹ ಪರಿಸರ ಪ್ರಜ್ಞೆಯನ್ನು ಹುಟ್ಟುಸ್ತೀರಾ ಅಂತ ಸವಾಲು ಹಾಕಿ ಕೂತ್ಕೊಂಡ್ರು. ಇದಕ್ಕೆ ಉತ್ತರವಾಗಿ ನನ್ನ ಹೆಂಡ್ತಿ ತನ್ನ acting ಅಧ್ಯಕ್ಷಿಣೆಯ ಭಾಷಣದಲ್ಲಿ ಏನು ಹೇಳಿದಳು ಅಂತ ಜ್ಞಾಪಿಸಿಕೊಂಡರೆ ಈಗಲೂ ಮೈಕೈ ಎಲ್ಲಾ ಬೆವರುತ್ತೆ.

''ಮಾನ್ಯ ಅವರೇ... ಅವರೇ... ಇವರೇ... ನಮ್ಮ ಬಡಾವಣೆಯನ್ನು ಸಿಂಗಪೂರ್ ಮಾಡಿ ಅಂತ ನೀವು ಹೇಳಿದಿರಲ್ಲವೆ? ಈ ಕ್ಷಣದಲ್ಲೇ ನಮ್ಮ ಮಹಿಳಾ ಸಮಾಜದ ವತಿಯಲ್ಲಿ ಮಾಡಲಿದ್ದೇವೆ. ಅದಕ್ಕೆ ನಿಮ್ಮನ್ನೂ (ನಮ್ಮ ಕಡೆ ಕೈತೋರಿಸುತ್ತಾ) ನಮ್ಮವರನ್ನೂ ಇವತ್ತು ಇಲ್ಲಿಗೆ ಆಹ್ವಾನಿಸಿದ್ದು. ಇನ್ನು ಕೇವಲ ಮೂರು ಗಂಟೆಗಳ ಕಾಲದಲ್ಲಿ ನಿಮ್ಮ ಕಣ್ಣು ಎದುರಿಗೇ ಒಂದು ಅತ್ಯಂತ ಸೋಜಿಗ ಘಟನೆ ನಡೆಯಲಿದೆ. ನಮ್ಮ ಸಂಘದ ಕಾರ್ಯದರ್ಶಿನಿಯಾದ ದೊಡ್ಡಬಸವಮ್ಮನವರು ಈಗ ಈ ಕಾರ್ಯಕ್ಕೆ ಚಾಲೂ ನೀಡುತ್ತಾರೆ'' ಅಂತ ಘೋಷಿಸಿದಳು.

ಈ ಮಾತು ಕೇಳುತ್ತಲೇ ಹಿಂಬದಿಯಲ್ಲಿ ನಿಂತಿದ್ದ ದೊಡ್ಡಬಸವಮ್ಮನವರು ವೇದಿಕೆಯ ಮುಂದೆ ಬಂದು ನಿಂತರು. ಅವರ ಹಿಂದೆ ಇಬ್ಬರು ಮಹಿಳಾಮಣಿಗಳು ಎರಡು ಗೋಣೀಚೀಲಗಳ ತುಂಬಾ ಅದೇನೋ ತುಂಬಿಕೊಂಡು ತಂದು ಇಟ್ಟರು. ನನ್ನ ಇನ್ನೊಂದು ಪಕ್ಕದಲ್ಲಿ ಕೂತಿದ್ದ ದೊಡ್ಡಬಸವಮ್ಮನವರ ಯಜಮಾನ್ರು – ಚಿಕ್ಕತಿಮ್ಮಣ್ಣನವರು ಯಾಕೋ ಹೆದರಿಕೊಂಡು ''ಇವಳದೇನೋ ತಕರಾರು ಇದೆ. ದೇವರೇ ಕಾಪಾಡಪ್ಪಾ'' ಅಂತ ದೇವರಲ್ಲಿ ಮೊರೆ ಹೋದ್ರು.

ದೊಡ್ಡಬಸವಮ್ಮನವರು ಚೆನ್ನಾಗಿ ಹೋಮ್‌ವರ್ಕ್ ಮಾಡಿದ್ರು ಅಂತ ಕಾಣುತ್ತೆ. ''ಟೀವಿ ಮಾಧ್ಯಮದವರೆಲ್ಲಾ ನಿಮ್ಮ ಕ್ಯಾಮರಾಗಳನ್ನು ವೇದಿಕೆ ಕಡೆ ತಿರುಗಿಸಿ'' ಅಂತ ಹೇಳಿದರು. ಸರಿ, ಬಿಡ್ತಾರ್ಯೆ ಟೀವಿಯವರು? ದನಶ್ರೀ, ಪ್ರೈವೇಟ್, 999, ಗೊಂದಲ ಎಲ್ಲಾ ಚಾನಲ್‌ರವರೂ ಕ್ಯಾಮರಾಗಳೊಂದಿಗೆ ವೇದಿಕೆಗೆ ನುಗ್ಗಿದರು, ನನ್ನ ಹೆಂಡ್ತಿ ಕಿತ್ತೂರು ರಾಣಿ ಚೆನ್ನಮ್ಮನ ಹಾಗೆ ಆವೇಶದಿಂದ ''ಮಾನ್ಯರೇ, ಈಗ ನಾವು ಹಾಗೂ ನಮ್ಮ ಗಂಡಂದಿರು ಎಷ್ಟು ಪ್ರಗತಿಶೀಲ ವ್ಯಕ್ತಿಗಳೆಂದು ತೋರಿಸ್ತೀವಿ ನೋಡಿ, ನಿನ್ನೆ ನಮ್ಮ ಕಾರ್ಯಕಾರಿ ಸಮಿತಿ ಸಭೆ ನಡೆಸ್ತಾ ಇದ್ದಾಗ, ನಮ್ಮ ಗಂಡಂದಿರೆಲ್ಲಾ, ತಾವಾಗಿಯೇ ನಮ್ಮ ಯಾವ ಒತ್ತಾಯವೂ ಇಲ್ಲದೆ ನಮಗೂ ನಮ್ಮ

ಬಡಾವಣೆಯ ಸ್ವಚ್ಛತೆ ಬಗ್ಗೆ ಬಹಳ ಕಾಳಜಿ ಇದೆ. ಸಮಾಜ ಸೇವೆ ಅಂದರೆ ನಮಗೆ ಬಹಳ ಇಷ್ಟ, ನಮ್ಮೆಲ್ಲರಿಗೂ ನೀವು ಒಂದೊಂದು ಪೊರಕೆ ಕೊಟ್ಟರೆ ನಾಳೆ ನಮ್ಮ ಬಡಾವಣೆಯನ್ನು ನೀವು ಹಿಂದೆಲ್ಲೂ ಕಾಣದಿರದ ಹಾಗೆ ಗುಡಿಸಿ ವಿಶ್ವಪರಿಸರ ದಿನಕ್ಕೆ ನಾವೂ ಭಾಗಿಗಳಾಗ್ತೀವಿ ಅಂತ ಅಂದ್ರು. ನಾವು ಈ ಗಂಡಸರ ಮನೋಧರ್ಮಕ್ಕೆ ಸೋತು, ದೊಡ್ಡಬಸವಮ್ಮನವರ ಮೂಲಕ ಇವತ್ತು ಇಪ್ಪತ್ತು ಪೊರಕೆಗಳನ್ನು ಇಲ್ಲಿಗೆ ತರಿಸಿದ್ದೀವಿ. ಘನತೆವೆತ್ತ (ಹಾಗಂದ್ರೇನೂ ಅಂತೀನಿ?) ನಮ್ಮ ಮೇಯರ್ರು, ಎಂ.ಎಲ್.ಎ.ಗಳು ನಮ್ಮ ವೇದಿಕೆಗೆ ಬಂದು ನಿಮ್ಮ ಸ್ವಹಸ್ತದಿಂದಲೇ ನಮ್ಮ ಗಂಡಂದಿರಿಗೆಲ್ಲಾ ಒಂದೊಂದು ಪೊರಕೆಯನ್ನು ನೀಡಿ, ಅವರ ಪರಿಸರ ಶ್ರಮಕ್ಕೆ ಶುಭ ಕೋರಬೇಕೆಂದು ಬೇಡಿಕೊಳ್ಳುತ್ತೇನೆ'' ಅಂತ ಹೇಳಿದಳು.

ಈ ಮಾತುಗಳಿಗೆ, ಓದುಗರೇ, ಸಭೆಯಲ್ಲಿ ಎರಡು ರೀತಿಯ ಪ್ರತಿಕ್ರಿಯೆಗಳು ಕಾಣಿಸಿಕೊಂಡವು.

1. ನಾವು, ಗಂಡಂದಿರು ಕೂತಿದ್ದ 20 ಜನರ ಸಾಲಿನಲ್ಲಿ, ಮೂರು ಜನರು ಮೂರ್ಛೆ ಹೋದರು. ಇನ್ನು ನಾಲ್ಕು ಜನರು ನೀರು! ನೀರು!! ಅಂತ ಕೂಗಿದ್ರು. ಮಿಕ್ಕಿದವರು ಅಲ್ಲಿಂದ ತಪ್ಪಿಸಿಕೊಳ್ಳಲು ಎದ್ದಾಗ ಅವರವರ ಹೆಂಡತಿಯರ ಘೋರ ಕಣ್ಣುಸನ್ನೆಗಳನ್ನು ಅರ್ಥಮಾಡಿಕೊಂಡು, ತೆಪ್ಪಗೆ ಮತ್ತೆ ಕೂತರು.
2. ''ಘನತೆವೆತ್ತ'' ವಿಐಪಿಗಳು ಮಿಂಚಿನಂತೆ ವೇದಿಕೆಗೆ ನುಗ್ಗಿ ದೊಡ್ಡಬಸವಮ್ಮನವರಿಗೆ ಶರಣರಾದರು.

ನನ್ನ ಹೆಂಡ್ತಿ ಮುಂದುವರೆಸಿದಳು: ''ಶ್ರೀ ತಿಪ್ಪೇರುದ್ರಪ್ಪನವರು (ಅಂದರೆ ನಾನೇ!) ನಮ್ಮ ಬಡಾವಣೆಯ ತೊಟ್ಟಿಗಳೆನ್ನೆಲ್ಲಾ ಸ್ವಚ್ಛಮಾಡಲು ಆಸೆ ಪಟ್ಟಿದ್ದಾರೆ. ಅವರಿಗೆ ಮೊದಲನೇ ಪೊರಕೆ! (ಕರತಾಡನ). ಶ್ರೀ ಗೋವಿಂದಪ್ಪನವರು ಮಿಲ್ಕ್‌ಬೂತ್ ಮುಂದೆ ಹಾಗೂ ಸ್ಕೂಲ್ ಗ್ರೌಂಡ್ಸ್ ಒಳಗೆ ಗುಡಿಸಲು ಕಾತುರರಾಗಿದ್ದಾರೆ, ಅವರಿಗೆ ಎರಡನೇ ಪೊರಕೆ! (ಕರತಾಡನ). ಶ್ರೀ ವಿರೂಪಾಕ್ಷ ಅವರು (ಖಜಾಂಚಿಯ ಗಂಡ) ಮೋರಿಗಳನ್ನೆಲ್ಲಾ ಕ್ಲೀನ್ ಮಾಡ್ತಾರಂತೆ. ಅವರಿಗೆ ಮೂರನೇ ಪೊರಕೆ! (ಕರತಾಡನ). ನಮ್ಮ ಹಿರಿಯರಾದ ಚಿಕ್ಕತಿಮ್ಮಣ್ಣನವರು ನಮ್ಮ ಬಡಾವಣೆಯ ದೇವಸ್ಥಾನದ ಮುಂದೆ ಗುಡಿಸೋದು ಮಾತ್ರವಲ್ಲ, ಸಾರಿಸೋದಕ್ಕೂ ಹಂಬಲಿಸ್ತಿದ್ದಾರೆ! ಅವರಿಗೆ ನಾಲ್ಕನೇ ಪೊರಕೆ ಹಾಗೂ ಒಂದು ಸಾರಿಸೋ ಬಟ್ಟೆ!! (ಅಖಂಡ ಕರತಾಡನ)'' ಹೀಗೆ ಇಪ್ಪತ್ತು ಜನರ ಹೆಸರನ್ನೂ ಓದೇ ಬಿಟ್ಳು, ನಾವೆಲ್ಲಾ, ಅದೂ ಮಾಧ್ಯಮದ ಮುಂದೆ,

ಬೇರೇನು ಮಾಡಲು ಸಾಧ್ಯ? ಸುಳ್ಳು ನಗು ನಗುತ್ತಾ ನಮ್ಮ ನಮ್ಮ ಪೊರಕೆ ಹಿಡಿದುಕೊಂಡು ನಮ್ಮ ನಮ್ಮ ಜಾಗಕ್ಕೆ ಹೊರಟ್ವಿ. ನಾವೆಲ್ಲಾದರೂ ಓಡಿಹೋಗ್ತೀವೇನೋ ಅಂತ ದೊಡಬಸವಮ್ಮನವರು ನಮ್ಮೆಲ್ಲರ ಹಿಂದೇನೂ ಒಬ್ಬೊಬ್ಬ ಕ್ಯಾಮರಮ್ಯಾನ್‌ನನ್ನು ಕಳಿಸಿದ್ದರು. ಸರಿ, ಗುಡಿಸಿದೀವಿ, ಗುಡಿಸಿದೀವಿ, ಅದೆಷ್ಟು ಚೆನ್ನಾಗಿ ಗುಡಿಸಿದೀವಿ ಅಂತೀರಿ! ನಿಜವಾಗ್ಲೂ ನಮ್ಮ ಬಡಾವಣೆ ಸಿಂಗಪೂರ್ ರೂಪಾನೇ ಹೊಂದ್ಕೊಂಡ್ತು. ನಾವು ಈ

ಕಾರ್ಯದಲ್ಲಿ ತೊಡಗಿದ್ದಾಗ ನನ್ನ ಹೆಂಡ್ತಿ ಅಲ್ಲಿ ನೆರದಿದ್ದವರಿಗೆಲ್ಲಾ "ಎಲ್ಲರೂ ದಯವಿಟ್ಟು ಬುಫೆ ಊಟಮಾಡಬೇಕು. ಬನ್ನಿ ಬನ್ನಿ, ಯಾಕೇಂದ್ರೆ ಈ ಸ್ವಚ್ಛತೆ ಕಾರ್ಯ ಇನ್ನೂ ಎರಡು ಗಂಟೆಗಳ ಕಾಲವಾದರೂ ಆಗುತ್ತೆ" ಅಂತ ಹೇಳಿದಳು.

ಮೂರನೇ ದಿನ ಪೇಪರ್ರುಗಳಲ್ಲಿ, ಟೀವಿಯಲ್ಲಿ ಪೊರಕೆ ಹಿಡಿದ ನಮ್ಮನ್ನೆಲ್ಲಾ ತೋರ್ಸಿದ್ದೂ ತೋರ್ಸಿದ್ದೇ! ನಮ್ಮ ಹೆಂಡ್ತೀರೆಲ್ಲಾ ಅವತ್ತು ಟೀ ಪಾರ್ಟಿ ಮಾಡ್ಕೊಂಡು ಪರಿಸರ ದಿನಾಚರಣೆ ಎಷ್ಟು ಚೆನ್ನಾಗಿ ಆಯ್ತು ಅಲ್ಲವೇನ್ರೀ...? ಅಂತ ತಮ್ಮನ್ನು ತಾವೇ ಅಭಿನಂದಿಸಿಕೊಂಡರು. ನಾವುಗಳು, ಅಂದರೆ ಗಂಡಂದಿರು, ದೇವ್ರೇ, ಆ ಪರ್ವತಮ್ಮನ್ನ ಬೆಂಗ್ಳೂರಿಗೆ ಬೇಗ ವಾಪಸ್ಸು ಕಳಿಸಪ್ಪಾ ಅಂತ ದೇವರನ್ನು ಕದ್ದು ಬೇಡಿಕೊಂಡ್ವಿ. ದೇವರು ದೊಡ್ಡವನು. ಪರ್ವತಮ್ಮ ಹೋದ ತಿಂಗಳು ವಾಪಸ್ ಆದ್ರು! ಆದರೆ ನಮಗೆಲ್ಲಾ ಒಂದು anticlimax ಕಾದಿತ್ತು!

ಪರ್ವತಮ್ಮ ತಾನಿಲ್ಲದೇ ಇರೋವಾಗ ನನ್ನ ಹೆಂಡ್ತಿ ಇಷ್ಟು ಚೆನ್ನಾಗಿ ಪರಿಸರ ದಿನಾಚರಣೆ ನಡೆಸಿದಳು ಅಂತ ವಿಷಯ ತಿಳಿತಾನೇ ಜ್ವಾಲಾಮುಖಿಯಾದರು. ಆಗಲಿ 2012 ಬರಲಿ, ನಾನು ಇವಳಿಗೆ ನಾನ್ಯಾರು ಅಂತ ತೋರಿಸ್ತೀನಿ ಅಂತ ಕಿಡಿ ಕಾರಿದರು.

ಓದುಗರೇ, ಈ 2012 ಜೂನ್ 5ರಂದು ಏನು ಆಯ್ತು ಅಂತ ಹೇಳೋ ಸಮಯಕ್ಕೆ ಈ ಮಾಸದ 'ಅಪರಂಜಿ' ನಿಮ್ಮ ಕೈಗೆ ಆಗಲೇ ಸೇರಿರುತ್ತೆ. ಹಾಗಾಗಿ ಪರ್ವತಮ್ಮನವರು ಈ ವರ್ಷಕ್ಕೆ ಏನು ಪ್ಲಾನ್ ಮಾಡಿದ್ರು ಅನ್ನೋದನ್ನ ಮಂಜುನಾಥಯ್ಯನವರ ಗೂಢಚರ್ಯೆಯಿಂದಾಗಿ ನಮಗೆ ಏನು ತಿಳೀತೋ ಅದನ್ನು ನಿಮಗೂ ತಿಳಿಸ್ತಿದೀನಿ. ಅದರ ಪ್ರಕಾರ:

1. ಈ ಸಾರಿ ಎರಡನೇ ಸಾಲಿನಲ್ಲಿ ಇಪ್ಪತ್ತು ಕುರ್ಚಿಗಳ ಬದಲಾಗಿ 21 ಕುರ್ಚಿಗಳನ್ನು ಕಾದಿರಿಸಿರುವುದು (ಎಕ್ಸ್‌ಟ್ರಾ ಕುರ್ಚಿ ಮಂಜುನಾಥಯ್ಯನವರಿಗೆ!)
2. ಅವರ ಭಾಷಣದಲ್ಲಿ.. "ನವೆಂಬರ್ 1ರಂದು ಆಗೋ ಹಾಗೆ, ತಾತ್ಕಾಲಿಕ ಕನ್ನಡ ಪ್ರೇಮಿಗಳು ನಾವಂತೂ ಅಲ್ಲ, ಜೂನ್ 5 ಆಗಲೀ, ವರ್ಷದ ಇನ್ಯಾವುದೇ ದಿನವಾಗಲೀ, 365 ದಿನಗಳೂ ನಮ್ಮ ಗಂಡಂದಿರು ಪರಿಸರ ಪ್ರೇಮಿಗಳಾಗೇ ಇರುತ್ತಾರೆ. ಹಾಗಾಗಿ ಇವತ್ತಿನಿಂದ ಅವರು ನಮ್ಮ ಬಡವಾಣೆಯನ್ನು ಪ್ರತಿ ನಿತ್ಯವೂ ಗುಡಿಸಲು ಮುಂದೆ ಬಂದಿದ್ದಾರೆ. ಹಾಗಾಗಿ ನಮ್ಮ ಗಂಡಂದಿರ ಕೈನಲ್ಲಿ ಪ್ರತಿ ನಿತ್ಯವೂ ಪೊರಕೆ ಇದ್ದೇ ಇರುತ್ತೆ! ಬಿ.ಬಿ.ಎಂ.ಪಿ.ಯವರು ಇದರಿಂದಾಗಿ ಇಂದಿನಿಂದ ನಮಗೆ ಉಚಿತವಾಗಿ ಪೊರಕೆಗಳನ್ನು ಕೊಡುತ್ತಾರೆ ಎಂದು ಹೇಳಲು ನನಗೆ ಬಹಳ ಸಂತೋಷವಾಗುತ್ತಿದೆ."

ಹೆಂಡ್ತೀರ ಜಗಳದಲ್ಲಿ ಗಂಡಂದಿರು ಬಡವಾದ್ರು ಅಂತ ಗಾದೆ ಕೇಳಿದೀರಾ? ನಮ್ಮೆಲ್ಲರ ಗತಿ ಏನಾಯ್ತು? ನಾವಿನ್ನೂ ಬದುಕಿದ್ದೀವೋ ಅಥವಾ ನೆಗೆದು ಬಿದ್ದಿದ್ದೀವೋ ಅಂತ ತಿಳಿದುಕೊಳ್ಳಲು ನಿಮ್ಮಲ್ಲಿ ಯಾರಿಗಾದರೂ ಮಾನವ ಸಹಜ ಕರುಣೆ ಕಾಳಜಿ ಇದ್ದರೆ, ನಮ್ಮನ್ನು ನೋಡಲು ನಮ್ಮ ಬಡಾವಣೆಗೆ ನೀವು ಬರಬಹುದು. ಆದರೆ ದಯವಿಟ್ಟು ಸಂಜೆಯಾದ ಮೇಲೆ ಬನ್ನಿ, ಊರೆಲ್ಲಾ ಗುಡಿಸಿ, ಸ್ನಾನಮಾಡಿ, ಸ್ಕೂಲ್‌ಗ್ರೌಂಡ್‌ನಲ್ಲಿ ಕೂತಿರ್ತೀವಿ............

# ಪ್ರಳಯ ಪ್ರಲಾಪ

**- ಆನಂದ**

'**ಈ** ವರ್ಷ ಹಾಸ್ಯೋತ್ಸವ ಇರುವುದಿಲ್ಲವೆ?' ಎಂದೊಬ್ಬರು ಕೇಳಿದ್ದರು. ಏಕೆಂದರೆ ಡಿ 21ರಂದು ಪ್ರಳಯವಾಗಿ ಇಡೀ ವಿಶ್ವವೇ ನಾಶವಾಗಿ ಹೋಗುವ ಹಿನ್ನಲೆಯಲ್ಲಿ ಅವರು ಆ ಪ್ರಶ್ನೆ ಹಾಕಿದ್ದರು. 'ಯೋಚನೆ ಮಾಡಬೇಡಿ ಡಿ 20ರಂದೇ ಹಾಸ್ಯೋತ್ಸವ ಆಚರಿಸೋಣ. ಎಲ್ಲರೂ ನಗುತಾ ನಗುತಾ ವಿದಾಯ ಹೇಳೋಣ' ಎಂದು ಅವರಿಗೆ ಸಮಾಧಾನ ಹೇಳಿದ್ದೇನೆ.

ಪ್ರಳಯ ಖಂಡಿತ ಎಂದು ಅನೇಕರು ನಂಬಿದ್ದಾರೆ. ಇಡೀ ಭೂಮಿಯೇ ಇಲ್ಲವಾಗುತ್ತದೆ ಎಂದು ಭವಿಷ್ಯವಾದಿಗಳು ಈಗಾಗಲೇ ಎಚ್ಚರಿಕೆ ನೀಡಿದ್ದಾರೆ. ನಾವು, ನೀವು, ಅವರು, ಇವರು ನಮ್ಮ ರಾಜಕಾರಣಿಗಳು ಸೇರಿದಂತೆ ಎಲ್ಲರೂ ನಿರ್ಗಮಿಸುತ್ತಾರೆ. ಕಲಿಯುಗ ಅಂತ್ಯ ಡಿ 21ರಂದು ಆಗಲಿದೆ ಎನ್ನಲಾಗಿದೆ. ರಾಜಕಾರಣಿಗಳು ನಿರ್ಗಮಿಸುತ್ತಾರೆ. ಪರ್ಮನೆಂಟಾಗಿ ಎಂಬುದು ಯಥೇಚ್ಛ ಖುಷಿ ತರುವ ಮಾತಾದರೂ ಅದನ್ನು ನೋಡಲು ನಾವು, ನೀವು ಇರುವುದಿಲ್ಲ ಎಂಬುದು ಮಾತ್ರ ಅಷ್ಟೇ ದುಃಖದ ಸಂಗತಿ.

ಡಿ 21ರ ಪ್ರಳಯದಲ್ಲಿ ಎಲ್ಲ ಮಾನವರೂ ಇಲ್ಲವಾಗುತ್ತಾರೆ ಎಂದು ಒಂದು ಕ್ಷಣ ನಂಬೋಣ. ಆಗ ನಮ್ಮ ನಿಮ್ಮ ಮಟ್ಟಿಗೆ ಮಾತ್ರ ವಿಶ್ವ ಅಂತ್ಯವಾಗಿರುತ್ತದೆ. ಪಕ್ಷಿ ಪ್ರಾಣಿಗಳು ಗಿಡ ಮರಗಳು ಇತರ ಜೀವ ಸಂಕುಲ ಮಾತ್ರ ಉಳಿದುಕೊಂಡಿರುತ್ತವೆ. 'ಹೀಗೂ ಉಂಟೆ!' ಎಂದು ಉದ್ಗಾರ ಎಳೆಯುವ ಬದಲು ಹೀಗೂ ಆಗಬಹುದು ಎಂದು ಭಾವಿಸಲು ತೊಂದರೆ ಏನಿಲ್ಲವಷ್ಟೆ?

**ವ್ಹಾ! ಒಂದು ಕ್ಷಣ ಕಲ್ಪಿಸಿಕೊಳ್ಳಿ. ಇಡೀ ಜಗತ್ತಿನಲ್ಲಿ ಮನುಷ್ಯರೇ ಇಲ್ಲ.**

ವ್ಹಾ! ಒಂದು ಕ್ಷಣ ಕಲ್ಪಿಸಿಕೊಳ್ಳಿ. ಇಡೀ ಜಗತ್ತಿನಲ್ಲಿ ಮನುಷ್ಯರೇ ಇಲ್ಲ. ಅಣ್ಣಾ ಹಜಾರೆಯಂತಹ ಸಾತ್ವಿಕರು, ಅಲ್ ಖೈದಾ ಅಂತಹ ಭಯೋತ್ಪಾದಕರು, ವೆಜಿಟೇರಿಯನ್ನರು, ನಾನ್‌ವೆಜಿಟೇರಿಯನ್ನರು, ಸಚಿನ್, ರೂಮಿ, ಅಂತಹ ಕ್ರೀಡಾಪಟುಗಳು, ಕರೀನಾ, ಕತ್ರೀನಾ, ಎಸ್‌ಆರ್‌ಕೆ ಅಂತಹ ನಟರು ಯಾರೂ ಇರುವುದಿಲ್ಲ. ಯಾರಿಗಾಗಿ 24/7 ವಾರ್ತೆ ಬಿತ್ತರಿಸಬೇಕು, ಬಿತ್ತರಿಸುವವರಾದರೂ ಯಾರು?

ಆಗ ಎಲ್ಲ ಪಕ್ಷಿಗಳು ಭೂಮ್ಯಾಕಾಶದಲ್ಲಿ ನಿರ್ಭಯವಾಗಿ ಹಾರಿಕೊಂಡಿರಬಹುದು. ಮೋಜಿಗಾಗಿ ಅದನ್ನು ಗುಂಡಿಟ್ಟು ಕೊಲ್ಲಲು, ತಮ್ಮ ಸಂತೋಷಕ್ಕಾಗಿ ಪಂಜರದಲ್ಲಿ ಬಂಧಿಸಿಡಲು ಅವಕಾಶವೇ ಇರುವುದಿಲ್ಲ. ಏಕೆಂದರೆ ಜನರೇ ಇರುವುದಿಲ್ಲವಲ್ಲ. ಜನರೇ ಇಲ್ಲದ ಮೇಲೆ ವಿಮಾನಗಳು, ವಿಜಯ್ ಮಲ್ಯ ಅವರ ವಿಮಾನಗಳಂತೆ, ಹಾರುವುದೇ

ಇಲ್ಲವಾದ್ದರಿಂದ ಪಕ್ಷಿಗಳು ಇಂಜಿನ್ ಒಳಗೆ ನುಸುಳುವ ಸಾಧ್ಯತೆಯೇ ಇರುವುದಿಲ್ಲ. ಕುರಿ ಕೋಳಿಗಳ ಕತ್ತನ್ನು ಕಚಕ್ ಎಂದು ಕತ್ತರಿಸಲು ಜನರಿರುವುದಿಲ್ಲ. ಆನೆಯಾದರೆ ಭಾರವಾದ ವಸ್ತುಗಳನ್ನ ಎಳೆಯಲು ದುಡಿಮೆಗೆ ಹಚ್ಚುವ ಮಂದಿ ಇರರು. ಸರ್ಕಸ್‌ನಲ್ಲಿ ಚಾಟಿಯಲ್ಲಿ ಹೊಡೆಸಿಕೊಂಡು ಜನರ ಮುಂದೆ ಪ್ರದರ್ಶನ ನೀಡಬೇಕಾಗಿ ಬರದು. ಮರವಾಗಿದ್ದರೆ ಕೊಡಲಿ ಏಟು ತಪ್ಪಿಸಿಕೊಳ್ಳಬಹುದು. ಎಲ್ಲ ಹೂಗಳು ವನಸುಮದಂತೆ ಮೌನದಿಂದ ಅರಳಬಹುದು. ನದಿಯಾದರೆ ಅಣೆಕಟ್ಟು ಜಲಾಶಯಗಳೆಂಬ ಎಡರುತೊಡರುಗಳಿಲ್ಲದೆ, ಮಲಿನ ಮಾಲಿನ್ಯಗಳಿಲ್ಲದೆ ಶುಭ್ರವಾಗಿ ಹರಿದು ಸಾಗರ ಸೇರಬಹುದು. ಮೀನು, ಆಮೆಗಳಾದರೆ ಬಲೆಗೆ ಬೀಳುವ ಭಯವಿಲ್ಲದೆ ನೀರಿನಲ್ಲಿ ಈಜಿಕೊಂಡಿರಬಹುದು. ರೇಷ್ಮೆ ಹುಳುವಾದರೆ ಕುದಿಯುವ ನೀರಿನಲ್ಲಿ ಚಿತ್ರಹಿಂಸೆಗೊಳಗಾಗಿ ಯಾವುದೋ ಮಹಿಳೆಯ ದೇಹನ್ನು ಅಲಂಕರಿಸುವ ಸಿಲ್ಕ್ ಸೀರೆಯಾಗಿ ಡಿಸ್ಕೌಂಟ್ ರೇಟಿನಲ್ಲಿ ಬಿಕರಿಯಾಗುವ ಮಾಲಾಗುವುದನ್ನು ತಪ್ಪಿಸಬಹುದು.

ಮಳೆ ಆದರೆ ಆಸಿಡ್‌ನೊಂದಿಗೆ ಕಲುಷಿತಗೊಳ್ಳದೆ ಶುಭ್ರ ಹನಿಯಾಗಿ ನೆಲ ಸೇರಬಹುದು. ಆಮ್ಲಜನಕವಾದರೆ ಮಾಲಿನ್ಯಗೊಳ್ಳುವ ಅವಕಾಶವೇ ಇಲ್ಲವಾಗಬಹುದು. ಸಾಗರದಲ್ಲಿ ಕಲುಷಿತ ಎಣ್ಣೆ ಬೆರೆಯದೆ ಇರಬಹುದು.

ವ್ಹಾ! ಮನುಷ್ಯನ ಗಜಿಬಿಜಿ ಇಲ್ಲ, ಕಿರುಚಾಟ, ಕೂಗಾಟ, ಭಾಷಣಗಳಿರುವುದಿಲ್ಲ. ಎಫ್.ಎಂ., ಟೀವಿಗಳ ಸದ್ದಿಲ್ಲ. ನೊ ಬ್ರೇಕಿಂಗ್ ನ್ಯೂಸ್.

ಕೇಳಿಬರುವುದು ಪಕ್ಷಿಯ ಚಿಲಿಪಿಲಿ, ಹರಿಯುವ ನೀರಿನ ಜುಳುಜುಳು ನಾದ, ಅಲೆಗಳ ಅಬ್ಬರ, ಮರಗಳ ಸುಂಯ್ ಸುಂಯ್, ದುಂಬಿಯ ಝೇಂಕಾರ, ಅಪ್ಪಳಿಸುವ ಮಳೆಯ ಪಟ್ ಪಟ್ ನಿನಾದ....

ಮಾಲಿನ್ಯವಿಲ್ಲದ ಶುಭ್ರ ಆಕಾಶದಲ್ಲಿ ಹೊಳೆಯುವ ತಾರೆಗಳು ಎಲ್ಲೆಡೆ ನೋಡಲು ಲಭ್ಯ.

ಎಲೈ ಭೂಮಿಯೇ, ನೀನೀಗ ಸಲೀಸಾಗಿ ಉಸಿರಾಡಬಹುದು – ಮತ್ತೆ ಮಾನವ ಜನ್ಮ ಅವತರಿಸುವವರೆಗೂ!

*(ಟೈಂಸ್ ಆಫ್ ಇಂಡಿಯಾದಲ್ಲಿ ಪ್ರಕಟವಾದ ನಾರಾಯಣಿ ಗಣೇಶ್ ಅವರ ಲೇಖನವನ್ನು ಆಧರಿಸಿ)*

## ಉತ್ತರ

ಒಬ್ಬ ತಿವಿದುಕೊಂಡು ಆತ್ಮಹತ್ಯೆ ಮಾಡಲು ನಿರ್ಧರಿಸಿ ಚಾಕುವನ್ನು ಬಿಸಿ ಮಾಡುತ್ತಿದ್ದ. 'ಬಿಸಿಯೇಕೆ?' ಎಂದರೆ 'ತಿವಿದುಕೊಂಡಾಗ ಇನ್‌ಫೆಕ್ಷನ್ ಆಗದಿರಲಿ ಎಂದು ಸ್ಟರಿಲೈಸ್ ಮಾಡುತ್ತಿದ್ದೇನೆ' ಎಂಬ ಉತ್ತರ ಬಂದಿತು.

# ದಿಟದ ನಾಗರ ಕಂಡರೆ....

- ಎಚ್. ಗೋಪಾಲಕೃಷ್ಣ

**ನಾ**ವು ಈಗಿರೋ ಮನೆ ಕಟ್ಟಿಸಿ ಸುಮಾರು ಮೂವತ್ತು ವರ್ಷಗಳು ಆದವೇನೋ. ಆಗ ಮನೆ ಕಟ್ಟಿಸಿ ನಾವು ವಾಸಕ್ಕೆ ಅಂತ ಈ ಕಾಡಿಗೆ ಬಂದು ಈ ಗೂಡಿಗೆ ಸೇರಿದಾಗ ಇಡೀ ಏರಿಯಾ ಬಟಾನ್ ಬಯಲು. ಒಂದು ರಸ್ತೆ ಇಲ್ಲ ಒಂದು ಮನೆ ಇಲ್ಲ; ಮನೆ ಪಕ್ಕದಲ್ಲಿ ಒಂದು ಕೆರೆ ಅದರಲ್ಲಿನ ನೀರು ಕುಡಿಯಲು ಬರುತ್ತಿದ್ದ ಹಸು ಎಮ್ಮೆ ಕರು ಹಾಗೂ ಮಿಕ್ಕ ಕಡೆಗಳಲ್ಲಿ ಬೆಳೆದು ನಿಂತಿದ್ದ ಕುರುಚಲು ಪೊದೆ ಹಾಗೂ ಹಸಿರು ಕಾಡು. ಒಂದು ಕಡೆ ಕಣ್ಣು ಹಾಯಿಸಿದರೆ ನಾಲ್ಕು ಮೈಲಿ ದೂರದಲ್ಲಿ ಹೋಗುತ್ತಿರುವ ಕೆಂಪು ಬಸ್ಸು ನೋಡಬಹುದು, ಇಡೀ ಏರಿಯಾಕ್ಕೆ ಅರೋ ಏಳೋ ಮನೆಗಳು... ಸುತ್ತಲೂ ಬೆಳೆದು ನಿಂತಿರುವ ಕಾಡು ಮರಗಳು, ಹಸು ಎಮ್ಮೆ ಮೇಯಿಸಿಕೊಂಡು ಬರುವ ಸುತ್ತಲಿನ ಹಳ್ಳಿಯ ಹುಡುಗರು – ಇವರುಗಳೇ ನಮ್ಮ ಪ್ರಪಂಚವಾಗಿದ್ದರು ಕೆಲವು ವರ್ಷಗಳು. ದಿವಸಕ್ಕೆ ಮಿನಿಮಂ ಮೂರು ಸಲ ಹಾವುಗಳು ಕಾಣಿಸಿಕೊಂಡು ಮೊದಮೊದಲು ಹೆದರಿಕೆ ಭಯ ಹುಟ್ಟಿಸುತ್ತಿದ್ದವು. ಅವೂ ಏನು ತರಹೇವಾರಿಯ ಜಾತಿಯವು – ಕೇರೆ ಹಾವಿನಿಂದ ಹಿಡಿದು ಮಂಡಲದ ಹಾವು, ಕರಿನಾಗರ, ನಾಗರ ಗೋಧಿ..... ಹೀಗೆ ವಿಚಿತ್ರ ಹೆಸರಿನವು. ನಮಗೋ ಹಾವು ಆಡಿಸುವವರು ಬುಟ್ಟಿಯಲ್ಲಿ ಇಟ್ಟುಕೊಂಡು ತೋರಿಸುವ ಹಾವುಗಳನ್ನು ಮಾತ್ರ ಕಂಡಿರುವವರು. ಹಸು ಮೇಯಿಸುವ ಹುಡುಗರು ಈ ಹಾವುಗಳ ಹೆಸರುಗಳನ್ನು ಅವುಗಳ ವಿಶೇಷತೆಯನ್ನು ಹೇಳುವಾಗ ಕಣ್ಣರಳಿಸಿ ಕೇಳುತ್ತಿದ್ದೆವು.


**ಕೆಲವು ಸಲ ಕನಸಿನಲ್ಲಿ ಹಾವುಗಳು ಬಂದು ಥ್ಯಾಂಕ್ಯೂ ಅಂದಂತೆ ಅನಿಸುವುದು ಏಕೆ?**

ಹಾವುಗಳನ್ನು ಹೊಡೆದು ಹಾಕಲು ಪುಕ್ಕಲು ಮತ್ತು ಭಯ. ಹಾವುಗಳನ್ನು ಸಾಯಿಸಬಾರದು ಎನ್ನುವ ನಂಬಿಕೆ (ಹಾವುಗಳು ದೇವರ ಅವತಾರವಂತೆ) ಮತ್ತು ಆಗ ತಾನೇ ಪರಿಸರ ರಕ್ಷಣೆಗೆ ಇವೂ ಬೇಕು ಅನ್ನುವ ತಿಳುವಳಿಕೆ ನಾವು ಹಾವು ಕಂಡರೆ ದೂರ ಓಡುವಂತೆ ಮಾಡುತ್ತಿತ್ತು. ಕೆಲವು ಧೈರ್ಯವಂತರು ಹಾವುಗಳನ್ನು ಕಂಡಕೂಡಲೇ ಅದರ ತಲೆಯ ಮೇಲೆ ದೊಡ್ಡ ಕಲ್ಲು ಎತ್ತಿಹಾಕಿಬಿಡುತ್ತಿದ್ದರು. ನಂತರ ಅದು ವಿಲಿ ವಿಲಿ ಒದ್ದಾಡಿ ಸಾಯುವ ತನಕ ಕಾದು ನಂತರ ಅದಕ್ಕೆ ಶವಸಂಸ್ಕಾರ ನಡೆಸಿ ಅಲ್ಲಿ ಒಂದು ಆರಿದ ಬೆಂಕಿಯ ಕುಪ್ಪೆಯ ಅವಶೇಷ ಬಿಟ್ಟು ಹೋಗುತ್ತಿದ್ದರು. ಹಾವು ಅಂದರೆ ಬ್ರಾಹ್ಮಣ ಸಾರ್, ಅವುಗಳನ್ನ ಸಂಸ್ಕಾರ ಇಲ್ಲದೆ ಹಾಗೇ ಬಿಡಬಾರದಂತೆ ಎನ್ನುವ ತಮ್ಮ ನಂಬಿಕೆಯನ್ನೂ ಹೇಳಿ ಹೋಗುತ್ತಿದ್ದರು ಅವರು. ಸುಮಾರು ದಿವಸ ನಾವು ಆ ಅವಶೇಷದ ಹತ್ತಿರಕ್ಕೂ ಸುಳಿಯದೇ ನಮ್ಮ ಮಡಿ

ಕಾಪಾಡಿಕೊಳ್ಳುತ್ತಿದ್ದೆವು. ಇದೂ ಪುಕ್ಕಲಿನ ಮುಂದುವರೆದ ಭಾಗವೇ! ನಾನು ಮನೆ ಕಟ್ಟಿಸಿದ್ದ ಕಾರ್ಖಾನೆಯ ಉತ್ತರ ದಿಕ್ಕಿಗೆ ಇರುವ ಭಾಗಕ್ಕೆ ನಾಗಾಲ್ಯಾಂಡ್ ಎಂದೇ ಹೆಸರು. ಒಂದು ಕಾಲದಲ್ಲಿ ಇಲ್ಲಿ ಬರೀ ಹಾವುಗಳೇ ಇದ್ದರಿಂದ ಈ ಹೆಸರು ಅಂತ ಕೆಲವರು ಆಗ ಹೇಳುತ್ತಿದ್ದರು. ನಿಜವಿದ್ದರೂ ಇರಬಹುದೇನೋ ಅನಿಸಿತ್ತು – ದಕ್ಷಿಣದ ಈ ತುದಿಯಲ್ಲಿನ ಈ ಕೊಂಪೆಗೆ ನಾಗಾಲ್ಯಾಂಡ್ ಅನ್ನುವ ಹೆಸರು ಯಾವ ಮಹಾರಾಜ ನೀಡಿದ ಎನ್ನುವ ಕುತೂಹಲವೂ ಸುಮಾರು ವರ್ಷ ಇತ್ತು.

ನಮ್ಮ ಕಾರ್ಖಾನೆ ಶುರುವಾದಾಗ ಕಟ್ಟಡ ನಿರ್ಮಾಣದ ಕೆಲಸಕ್ಕೆ ಅಂತಲೇ ಕೆಲವು ಫ್ರೆಂಚ್ ಇಂಜಿನಿಯರುಗಳು ಬಂದಿದ್ದರು. ಇಲ್ಲಿನ ಹಾವುಗಳನ್ನು ನೋಡಿ ಅವರಿಗೂ ಭಯ ಅಂದರೆ ಭಯ. ಮೊಣಕಾಲಿನವರೆಗೂ ಇರುವ ಗಂ ಬೂಟುಗಳನ್ನು ಹಾಕಿ ಓಡಾಡುತ್ತಿದ್ದರು. ಆದರೂ ಕಟ್ಟಡ ಕಟ್ಟಬೇಕಾದರೆ ನೆಲ ಅಗೆಯುವುದು ಎಲ್ಲವೂ ಇರುತ್ತಲ್ಲಾ. ಅವರಿಗೂ ಸುಮಾರು ಸಲ ಈ ಹಾವುಗಳು ಧುತ್ತೆಂದು ಎದುರು ಕಾಣಿಸಿದ್ದವು. ಜೀವಭಯ ಹುಟ್ಟಿಸಿದ್ದವು. ಜೀವ ಭಯ ಕಡಿಮೆ ಮಾಡಲು ಅವರ ಛೀಫ್ ಒಂದು ಉಪಾಯ ಕಂಡುಹಿಡಿದಿದ್ದ. ಸುತ್ತಲಿನ ಹಳ್ಳಿಯವರಿಗೆ ತಿಳಿಯುವ ಹಾಗೆ ಒಂದು ಆದೇಶ ಹೊರಡಿಸಿದ್ದನಂತೆ. ಹಾವುಗಳನ್ನು ಸಾಯಿಸಿ ಅದರ ಶವ ತಂದು ತನಗೆ ತೋರಿಸಿದವರಿಗೆ ಒಂದು ಹಾವಿಗೆ ಎರಡು ಆಣೆ ಭಕ್ಷೀಸು ನೀಡುವುದು. ಹಳ್ಳಿಯವರು ನಂತರ ತಂಡೋಪಂಡವಾಗಿ ಹಾವುಗಳನ್ನು ಹೊತ್ತು ತಂದು ಭಕ್ಷೀಸು ಪಡೆದರಂತೆ. ಕೆಲವು ಹಾವುಗಳು ಮತ್ತೆ ಮತ್ತೆ ಪ್ರದರ್ಶನದ ಭಾಗ್ಯ ಪಡೆಯಿತಂತೆ! ಇದು ಕಥೆಯ ಒಂದು ಭಾಗ. ಅದರ ಎರಡನೇ ಭಾಗ – ಸುಮಾರು ಹಾವುಗಳನ್ನು ಹೀಗೆ ಸಾಯಿಸಿ ಆಯಿತು. ವರ್ಷ ಮುಗಿಯಿತು. ಆಡಿಟ್‌ನವರು ಲೆಕ್ಕ ಪರಿಶೋಧನೆಗೆ ಕೂತರಂತೆ. ಆಡಿಟ್ ವರದಿ ಮುಗಿದ ನಂತರ ಅವರು ಮಾಡಿದ್ದ ಕಾಮೆಂಟು ಹೀಗಿತ್ತಂತೆ – ಇಂಡಿಯಾದಲ್ಲಿ ಒಂದು ಹಾವಿಗೆ ಎರಡು ಎರಡು ಆಣೆ ಎಂದರೆ ತೀರಾ ದುಬಾರಿ, ದರ ನಿಷ್ಕರ್ಷೆಗೆ ಮುನ್ನ ಸಂಬಂಧಿಸಿದವರು ಕೊಂಚ ಯೋಚಿಸಿ ಮುನ್ನಡಿಯಿಡಬೇಕು ಅಂತ!

ನಾವು ಮನೆ ಕಟ್ಟಿದ್ದು ಹೇಳಿದೆ. ಮನೆ ಕಟ್ಟಬೇಕಾದರೆ ಅಲ್ಲಿ ಮನೆ ಸಾಮಾನು ಸರಂಜಾಮು ಶೇಖರಣೆಗೆ ಅಂತ ಒಂದು ಷೆಡ್ಡು ಹಾಕಿದ್ದೆವು. ಮನೆಯ ಒಂದು ಮೂಲೆಯಲ್ಲಿ ಈ ಷೆಡ್ಡು ತನ್ನ ಪಾಡಿಗೆ ತಾನಿತ್ತು. ಮನೆ ಮುಗಿದ ನಂತರವೂ ಸುಮಾರು ವರ್ಷ ಈ ಷೆಡ್ಡು ಇತ್ತು – ಮನೆಯಲ್ಲಿ ಉಪಯೋಗಕ್ಕೆ ಬಾರದ ಸಾಮಾನುಗಳನ್ನು ಈ ಷೆಡ್ಡಿನಲ್ಲಿ ಹಾಕುತ್ತಿದ್ದೆವು. ಒಮ್ಮೆ ಈ ಷೆಡ್ಡಿನಲ್ಲಿ ಒಂದು ಹಾವು ಹೋಗಿದ್ದು ನಮ್ಮ ಮನೆಯಲ್ಲಿ ನನ್ನ ಮಗಳು ನೋಡಿಬಿಟ್ಟಳು. ನೋಡಿದವಳು ಎಲ್ಲರಿಗೂ ಅದರೊಳಗೆ ಹಾವು ಹೋಯಿತು ಅಂತಲೂ ಪ್ರಚಾರ ಮಾಡಿಬಿಟ್ಟಳು. ಸರಿ ಷೆಡ್ಡು ತೆಗೆಸು ಅಂತ ಪ್ರೆಷರು ಶುರುವಾಯಿತು. ನನಗೋ ಕಟ್ಟಿದ್ದು ಯಾವುದನ್ನೂ ಕೆಡವಿಸಬಾರದು ಅನ್ನುವ ಸ್ಕೂಲ್ ಆಫ್ ಥಿಂಕಿಂಗ್‌ನಲ್ಲಿ ಬೆಳೆದವನು ನಾನು. ಹಾವು ನಾವು ಕೆಣಕದೇ ಕಚ್ಚದು ಅದರಿಂದ ಹೆದರೋದು ಬೇಡ ಅದು ನಮಗೇನೂ ಮಾಡದು. ಅಂತ ಸಮಾಧಾನಿಸಲು ಯತ್ನಿಸಿದೆ. ಅದು ಫಲಕಾರಿಯಾಗಲಿಲ್ಲ. ಹಠ ಹಿಡಿದು ಷೆಡ್ಡು ತೆಗೆಸಲೇಬೇಕು ಅನ್ನುವ ಠರಾವು ಮನೆಯೆಂಬ ಪಾರ್ಲಿಮೆಂಟಿನಲ್ಲಿ ಪಾಸೂ



ಆಗಿಬಿಟ್ಟಿತು. ಸರಿ, ನಾನೂ ಪ್ರಜಾಪ್ರಭುತ್ವವಾದಿ, ಬಹುಮತಕ್ಕೆ ಒಪ್ಪಿಗೆ ನೀಡದಿದ್ದರೆ ಹೇಗೆ? ಷೆಡ್ಡು ಕೆಡವಲು ಕೂಲಿಯವರನ್ನು ಹುಡುಕಿ ಅವರಿಗೆ ಕೆಲಸ ಒಪ್ಪಿಸಿದ್ದೂ ಆಯಿತು. ಇಬ್ಬರು ಕಟ್ಟು ಮಸ್ತಾದ ಯುವಕರು ಒಂದು ಭಾನುವಾರ ಷೆಡ್ಡು ಕೆಡವಲು ಹಾರೆ, ಪಿಕಾಸಿ, ಗುದ್ದಲಿ ಹಿಡಿದು ಬಂದರು. ದೂರ ನಿಂತು ಮನೆಯವರು ಅವರಿಗೆ ಸೂಚನೆ ನೀಡಿದ್ದೂ ಆಯಿತು. ಅದರಲ್ಲಿ ಹಾವಿದ್ದರೂ ಇರಬಹುದು, ಅದು ಓಡಾಡುವುದನ್ನು ನಮ್ಮ ಮಗು ನೋಡಿದೆ, ಅದರಿಂದ ಹುಷಾರು ಅಂತ ಸೇರಿಸಲು ಮರೆಯಲಿಲ್ಲ. ಹದಿವಯಸ್ಸಿನ ಹುಡುಗರು ಉತ್ಸಾಹದಿಂದಲೇ ಕೆಡವುವ ಕೆಲಸ ಶುರು ಹಚ್ಚಿಕೊಂಡರು. ಹತ್ತು ಹದಿನೈದು ನಿಮಿಷ ಗೋಡೆ ಕುಟ್ಟಿ ಕೆಡವಿ ಮಾಡಿರಬಹುದು. ಅವರಲ್ಲಿ ಒಬ್ಬ ಆಚೆ ಹಾರಿ ಓಡಲು ಶುರು ಮಡಿದ. ದೂರ ಓಡಿ ಸಾರ್ ಅದರಲ್ಲಿ ಅದೇನೋ ಕಪ್ಪಗೆ ಓಡಾಡ್ತಾ ಇದೆ.... ಅಂದ. ಜತೆಯವನು ಇನ್ನೂ ಅಲ್ಲೇ ನಿಂತಿದ್ದವನು ಏನಿಲ್ಲ ಬಾರಲಾ ಅಂತ ಅವನನ್ನ ಪುಸಲಾಯಿಸಿ ಮತ್ತೆ ಕರಕೊಂಡ. ಇಬ್ಬರೂ ಹಾಗೇ ಹಾರೆ ಎತ್ತಿ ಹಾಕಬೇಕಾದರೆ ಕರೀ ಹಾವು ಆಚೆ ಬಂದು ತಪ್ಪಿಸಿಕೊಳ್ಳಲು ಅತ್ತಿತ್ತ ನೋಡಿತು.

'ಸಾರ್, ಹಾವು ಕರೀ ನಾಗರ ಸಾರ್' ಅಂತ ಕೆಲಸದವನು ಕೂಗಿದ.

ದೂರ ನಿಂತು ನೋಡಿದೆ. ಅದು ಜಾಗ ಹುಡುಕಲು ಅತ್ತಿತ್ತ ನೋಡುತ್ತಾ ತಪ್ಪಿಸಿಕೊಳ್ಳಲು ಹವಣಿಸುತ್ತಾ ಇತ್ತು. ಅದು ಹಾಗೆ ಮಾಡುತ್ತಿರಬೇಕಾದರೇ ಮತ್ತೊಂದು ಇನ್ನೊಂದು ಸಂದಿನಿಂದ ಆಚೆ ಬರುತ್ತಿದೆ!

ಅದರ ಮುಖ ನೋಡಿದರೆ 'ಅಯ್ಯಾ ಮನುಷ್ಯ, ನಾವೇನು ಮಾಡಿದ್ದೀವಿ ನಿನಗೆ? ಹೀಗೆ ನಮ್ಮನ್ನೇಕೆ ಹೊಡೆದು ಸಾಯಿಸಲು ಯೋಚಿಸುತ್ತಾ ಇದ್ದೀ' ಅಂತ ಕೇಳಿದ ಹಾಗನ್ನಿಸಿತು.

ಸಾರ್, ಹೊಡೆದು ಹಾಕಿಬಿಡ್ತೀನಿ, ಅವು ವಿಸದ್ದು.. ಅಂತ ನಮ್ಮ ಕೆಲಸದವರು.

'ಎಷ್ಟು ಹೊಡೆದು ಹಾಕೋಕ್ಕೆ?' ಅಂತ ಕೇಳಿದೆ.

'ನೂರು ರೂಪಾಯಿ ಕೊಡಿ ಸಾಕು...' ಅಂದ.

'ಏನು ಎರಡಕ್ಕೆ ನೂರು ರೂಪಾಯಾ? ಅದು ಅತಿ ಜಾಸ್ತಿ' ಎನ್ನುವ ಅರ್ಥದಲ್ಲಿ ಕೇಳಿದೆ.

'ಎರಡಕ್ಕಲ್ಲಾ ಒಂದಕ್ಕೆ...' ಅಂದ. ತಲೆಯಾಡಿಸಿದೆ ಬೇಡ ಅನ್ನುವ ಹಾಗೆ..

'ಎಷ್ಟು ಕೊಡ್ತೀರೀ ಮತ್ತೆ?'

'ಎರಡೂ ಸೇರಿ ನೂರು?'

'ಇಲ್ಲ ನೂರೈವತ್ತು ಕೊಟ್ಬಿಡಿ... ಲೇ ಹಾರೆ ತಕ್ಕೊಳ್ಳೋ... ಅಂತ ಹಾರೆ ತಗೊಂಡ. ಸುತ್ತಲೂ ಸೇರಿದ್ದ ಜನ ಅವನಿಗೆ ಹಾವು ಹೇಗೆ ಹೊಡೀಬೇಕು ಅಂತ ಪಾಠ ಹೇಳುತ್ತಿದ್ದರು. ಕಲ್ಲ

ನಾಗರ ಕಂಡರೆ ಹಾಲೆರೆವರಯ್ಯಾ ದಿಟದ ನಗರ ಕಂಡರೆ... ವಚನ ನೆನೆಪಿಗೆ ಬರಬೇಕೇ?' ಆ ಜನರನ್ನ ದೂರ ಹೋಗಿ ಅಂತ ಕಳಿಸಿದೆ.

'ನಿಲ್ಲಿಸು ಒಂದು ನಿಮಿಷ. ಅದನ್ನ ಹಾಗೇ ಗೋಣೀಚೀಲದಲ್ಲಿ ಹಿಡಿಯೋದಕ್ಕೆ ಎಷ್ಟು ಕೊಡಬೇಕು?' ಅಂತ ಕೇಳಿದೆ.

'ಅದು ಕಷ್ಟ, ಕಚ್ಚಿ ಬಿಟ್ಟರೆ?'

'ಕಚ್ಚಿಸಿಕೊಳ್ಳದೇ ಹಿಡೀಬೇಕು...'

'ಇನ್ನೂರು ಕೊಡ್ತೀರಾ ಒಂದಕ್ಕೆ?'

ಚೌಕಾಸಿ ಮಾಡಿ ಮುನ್ನೂರಕ್ಕೆ ಒಪ್ಪಿಸಿದೆ. ಗೋಣೀಚೀಲ ತಂದು ಹಾವುಗಳನ್ನ ಹುಷಾರಾಗಿ ಅದರಲ್ಲಿ ಹೋಗುವ ಹಾಗೆ ಮಾಡಿ ಚೀಲದ ಬಾಯಿ ಕಟ್ಟಿದ. ಚೀಲ ಹೊತ್ತು ದೂರ ಬಿಡ್ತೀನಿ ಸಾರ್ ಅಂತ ಹೇಳಿ ದುಡ್ಡು ವಸೂಲಿ ಮಾಡಿಕೊಂಡು ಹೊರಟ. ಎರಡು ಹಾವುಗಳನ್ನು ಅವುಗಳ ಸಾವಿನ ದವಡೆಯಿಂದ ತಪ್ಪಿಸಿ ಪರಿಸರ ರಕ್ಷಣೆಗೆ ನನ್ನ ಪಾಲು ನೀಡಿದೆ ಎನ್ನುವ ಭಾವ ಅವತ್ತು ಬಂದಿತೋ ತಿಳಿಯದು, ಆದರೆ ಕೆಲವು ಸಲ ಕನಸಿನಲ್ಲಿ ಹಾವುಗಳು ಬಂದು ಥ್ಯಾಂಕ್ಯೂ ಅಂದಂತೆ ಅನಿಸುತ್ತೆ!

## ಎಲ್ಲ ದಾರಿಗಳೂ.........

ಸಾಕ್ಷಾತ್ಕಾರವ ಪಡೆಯಲು ಯೋಗಿಯು
ದೀರ್ಘ ತಪಸ್ಸನ್ನು ಮಾಡಿದನು
ಹಗಲಿರುಳೆನ್ನದೆ, ಮಳೆಬಿಸಿಲೆನ್ನದೆ
ಧ್ಯಾನ ಸಮುದ್ರದಿ ಮುಳುಗಿದನು;
ಕೊನೆಗಾದನು ಯೋಗಿಯು ಕೃತಕೃತ್ಯ,
ಕಂಡನು ಶಿವ ತಾಂಡವ ನೃತ್ಯ!

ವಸ್ತುವ ಭೇದಿಸಿ, ಅಣುವನು ಶೋಧಿಸಿ,
ಅಂತಿಮ ರೂಪವನರಸಿದನು
ಭೌತಿಕ ಶಾಸ್ತ್ರದ ವಿಧಾನ ಮಾರ್ಗದಿ
ಕೊನೆಯಾ ಹಂತವ ಹುಡುಕಿದನು
ಅಂತಿಮ ಹಂತದಿ ಕಂಡನು ಆತನು
ಚೈತನ್ಯದ ಕಿಡಿಯೊಂದ,
ಮಣಿಯುತಲೆಂದನು, ''ಇದೇ ಪಾದರವಿಂದ''!

- ಶ್ರೀಹರಿ

– ದಂನಲಿ

- ಟ್ರಿವಡ್ರಂ ತಿರುವನಂತಪುರ ಆಯಿತು, ಮದ್ರಾಸ್ ಚೆನ್ನೈ ಆಯಿತು. *Bangalore Bengaluru* ಅಷ್ಟೇ ಆಯಿತು. ಏಕೆ? ಏಕೆಂದರೆ ಕನ್ನಡಿಗರದ್ದು ಏನಿದ್ದರೂ ಸ್ವಲ್ಪ ಅಡ್ಜಸ್ಟ್ ಮಾಡಿಕೊಳ್ಳೊ ಪ್ರವೃತ್ತಿ ತಾನೆ?
- ಸೋನಿಯಾ ಗಾಂಧಿ ಪವರ್ ಬಿಹೈಂಡ್ ದಿ ತ್ರೋನ್ ಆದರೆ ಮಮತಾ ದೀದಿ ಅವರನ್ನು ಪವರ್ ಬಿಹೈಂಡ್ ದಿ ಪವರ್ ಬಿಹೈಂಡ್ ದಿ ತ್ರೋನ್.
- *The best way to remember Pratibha Patil's role is to forget it.*
- ಜಿಮ್‌ಗೆ ಹೋಗದೆ ಇರುವವನನ್ನು ಜಿಮ್‌ನಾಸ್ತಿಕ ಎಂದು ಕರೆಯಬಹುದು.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ವಿ.ಆರ್.ಎಸ್. ತೆಗೆದುಕೊಂಡಿರುವವರನ್ನು ಸ್ವಯಂ ನಿರುದ್ಯೋಗಿಗಳು ಎನ್ನುತ್ತಾರೆ ಒಬ್ಬರು.
- *What is forgiveness? It is the wonderful smell that a flower gives when it's being crushed!*
- ಯಶಸ್ಸಿನ ಏಣಿ ಏರುತ್ತಿರುವಾಗ ಅದು ಸರಿಯಾದ ಗೋಡೆಗೆ ಒರಗಿದೆಯೆ ಎಂದು ಆಗಾಗ್ಗೆ ಪರೀಕ್ಷಿಸುತ್ತಿರುವುದು ಒಳ್ಳೆಯದು.
- ನಿಮ್ಮ ಆಲೋಚನೆಗಳ ಬಗ್ಗೆ ಜಾಗ್ರತೆಯಿಂದಿರಿ. ಏಕೆಂದರೆ ಅವು ಯಾವುದೇ ಕ್ಷಣ ಪದಗಳಾಗಬಹುದು.
- ಬೆಸ್ಟ್ ಆಕ್ಟರ್ ಇನ್ ಸೈಲೆಂಟ್ ರೋಲ್: **ಡಾ. ಮನಮೋಹನ್ ಸಿಂಗ್.**
- ಹೆಚ್ಚು ಹೇಳದಿರುವವರಲ್ಲಿ ಎರಡು ತರಹದವರು ಇರುತ್ತಾರೆ. ಒಬ್ಬರು, ಮಿತಭಾಷಿಗಳು. ಎರಡನೆಯವರು, ವಾಚಾಳಿಗಳು.
- *The Indian thali is a conglomeration of independent food republics that choose to come together.*
- ನಮ್ಮ ಬದುಕನ್ನು ಕುರಿತು ನಾವೇ ಹೇಳಿಕೊಂಡಿದ್ದಷ್ಟು ಎಷ್ಟೇ ಪ್ರಾಮಾಣಿಕವಾಗಿದ್ದರೂ ಅದು ಕನ್ನಡಿಯಲ್ಲಿ ನೋಡಿಕೊಂಡ ಮುಖದಂತೆ. ಎಲ್ಲಾ ಸರಿಯಾಗಿರುವಂತೆ ಕಂಡರೂ ನಮಗೇ ತಿಳಿಯದಂತೆ ಅದು ನಮ್ಮ ಎಡ ಬಲಗಳನ್ನು ಬದಲಿಸಿಬಿಟ್ಟಿರುತ್ತದೆ.
- ಐಟಿ ಮಂದಿಯನ್ನು *technoknowledgeable* ಎಂದರೆ ಹೇಗೆ?
- ಒಂದು ರಜಾ ದಿನ ಸಹ ಇಲ್ಲದಿರುವುದೇ ನಿವೃತ್ತಿಯ ಸಮಸ್ಯೆ.

# ಕಾಗೆಗಳ ಟೀಮ್-ಸ್ಪಿರಿಟ್

- ರಮ್ಯ

***ಕಾಗೆಗಳಿಗೆ ಬಹಳ ಬುದ್ಧಿ ಇದೆ. ಅವು ಮನುಷ್ಯರ ಧ್ವನಿಯನ್ನು ಚೆನ್ನಾಗಿ ಗುರುತು ಹಿಡಿಯಬಲ್ಲವು ಮತ್ತು ಅವುಗಳ ಜ್ಞಾಪಕ ಶಕ್ತಿಯೂ ಅಗಾಧವಾಗಿದೆ.***

– ಇದು ವಿಯನ್ನಾ ವಿಜ್ಞಾನಿಗಳ ಸಂಶೋಧನೆ.

ಆದರೆ ಈ ವಿಷಯ ನನಗೆ ಹೊಸದೇನಲ್ಲ; ನನ್ನ ಅನುಭವದಿಂದಲೇ ಅರಿತುಕೊಂಡ ವಿಷಯ. ಬಿರು ಬೇಸಿಗೆಯಲ್ಲಿ ನನ್ನ ಹೆಂಡತಿ, ಅಯ್ಯೋ ಬಿಸಿಲು ಹಾಳಾಗಿ ಹೋಗ್ತಿದೆಯೆಲ್ಲಾ, ಸಂಡಿಗೆ ಮಾಡ್ತೀನಿ ಅಂತ ಹೋಗಿದ್ದೇ ನನಗೆ ಶಾಪವಾಗಿ ವಕ್ರಿಸಿತು.

ಹೊರಗಡೆ ಒಣಗಲೀಂತ ಹಾಕಿದ ಸಂಡಿಗೆಗೆ ನಾನೇ ಕಾವಲುಗಾರ. ಒಂದೆರೆಡು ಕಾಗೆ ಹತ್ತಿರ ಬಂತು. ನಾನು 'ಹುಷ್, ಹುಷ್' ಅಂತ ಓಡಿಸ್ದೆ. ಮತ್ತೆ ನನ್ನ ಹೆಂಡತಿ ಹತ್ತಿರ, 'ಮುಂಡೇವು... ಈ ಕಾಗೆಗಳ ಕಾಟ ಬಹಳ ಆಯ್ತು. ಕೋಲಿಟ್ಕೊಂಡು ಓಡಿಸ್ಬೇಕು. ಇಲ್ದಿದ್ರೆ ಎಲ್ಲಾ ಹಾಳು ಮಾಡುತ್ವೆ ಎಂದು ಅವುಗಳನ್ನ ಅಟ್ಟಿಸಿಕೊಂಡು ಹೋದೆ. ಅಯ್ಯೋ ಹೋಗ್ಲಿ ಬಿಡಿ.. ಅವುಗಳೇನು ಮಾಡುತ್ವೆ, ಪಾಪ!' ಅಂದ್ಲು.

ಕಾಗೆಗಳು ನಮ್ಮಿಬ್ಬರನ್ನೂ ಒಂದೆರೆಡು ಸಲ ನೋಡಿ ಏನೋ ಮಾತಾಡ್ಕೊಂಡು ಹಾರಿ ಹೋದ್ವು.

ಸಾಯಂಕಾಲ ನಾನು ನನ್ನ ಹೆಂಡತಿ ವಾಕಿಂಗ್ ಹೋಗುವಾಗ, ಕತ್ತಿನ ಹತ್ರ ಏನೋ ಬೆಚ್ಚಗಾದಂತಾಯಿತು. 'ಏನ್ರಿ ಇದೂ! ಥೂ.. ಕಾಗೆ ಇಶ್ಶಿ ಮಾಡಿದೆ ನಿಮ್ಮ ಮೇಲೆ..... ಷರ್ಟಿನ ಕಾಲರ್ಗೂ ತಾಕಿದೆ ' ಅಂದ್ಲೂ ನನ್ನಾಕೆ. ಅಲ್ಲೇ ಬಿದ್ದಿದ್ದ ಮರದ ಎಲೆ ತೊಗೊಂಡು ಕತ್ತೂ ಷರ್ಟು ಒರಸಿದ್ಲು. ಮರದ ಮೇಲಿದ್ದೆರೆಡು ಕಾಗೆಗಳು ಗಹಗಹಸಿ ನಕ್ಕಹಾಗಾಯಿತು. ನನ್ನ ಹೊಸಾ ಬಿಳಿ ಶರ್ಟಿನ ಕಾಲರ್ ಮೇಲೆ ಕೂತಿದ್ದ ಕಾಗೆಗಳ ಸಿಗ್ನೇಚರ್ ಇಶ್ಶಿ ಹೋಗಲೇ ಇಲ್ಲ.

ಈ ಎಪಿಸೋಡ್ ಮರೆತು ಹೋಯಿತು. ಇದಾದ ಸ್ವಲ್ಪ ದಿನಕ್ಕೆ ರಾಮನವಮೀಲಿ ಮೈಸೂರಿನ ನಾಗರಾಜ್ ಮತ್ತು ಮಂಜುನಾಥರ ಪಿಟೀಲು ಕಛೇರಿಯಿತ್ತು. ಅಮೋಘವಾದ ಕಛೇರಿ. ನನಗೆ ಮೊದಲಿನಿಂದಲೂ ಸಂಗೀತವೆಂದರೆ ಪ್ರಾಣ; ಕಲಿಯೋದಕ್ಕೂ ಆಸೆ. ಮನೆಯ ಹತ್ತಿರವಿದ್ದ ಸಂಗೀತ ಕಲಿಸುವ ಸ್ಕೂಲ್‌ಗೆ ಸೇರ್ಕೊಂಡೆ.

ಸಾ ಪಾ ಸ ಶುರುಮಾಡಿ, ಜಂಟಿ ವರಸೆಯಿಂದ ವರ್ಣಕ್ಕೆ ಬಂದೆ. ಮಲಹರಿಯಲ್ಲಿ 'ಲಂಬೋದರ ಲಕುಮಿಕರ' ಶುರು ಮಾಡಿದ್ರು. ಈ ಮಧ್ಯೆ ನಮ್ಮ ಮೇಷ್ಟ್ರು 'ಪರವಾಗಿಲ್ಲ ನಿಮಗೆ ಸಂಗೀತದ ಗಂಧವಿದೆ, ಶ್ರದ್ಧೆಯಿಂದ ಕಲಿತರೆ ಸಂಗೀತ ಖಂಡಿತ ಬರುತ್ತೆ. ಒಂದು ಒಳ್ಳೆ ವೈಯಲಿನ್ ತೊಗೊಳ್ಳಿ.' ಅಂತ ಹೇಳಿ ಅವರೇ ಅಂಗಡಿಗೆ ಬಂದು ಆರಿಸಿದರು. ಮೂರು ಸಾವಿರ ಕೊಟ್ಟು ಮನೆಗೆ ಒಂದು ವೈಯಲಿನ್ ತಂದಿದ್ದಾಯಿತು. ಇನ್ನು ಮನೆಯಲ್ಲೇ ಪ್ರಾಕ್ಟೀಸ್ ಮಾಡಬಹುದು ಅಂತ ಅಂದ್ಕೊಂಡೆ.

ಮರುದಿನ ನಾನು 'ಲಂಬೋದರ' ಶುರುಮಾಡಿ, 'ಸರಿಮಾಗರಿ ಸರಿಗರಿಸ....' ಅಂದು ನುಡಿಸುವಾಗ ಜೊತೆಗೆ ಕಾ ಕಾ ಕಾ ಅಂತ ಹತ್ತು ಧ್ವನಿಗಳು ಸೇರ್ಕೊಂಡ್ತು. 'ಅಂಬಾಸುತ ಅಮರವಿನುತ' ಜೊತೆಗೆ ಕಿರ್ ಕಿರ್ ಕಿರ್ ಎಂದು ಅವುಗಳ ಕೋರಸ್.



ಅಷ್ಟು ಹೊತ್ತಿಗೆ ನಮ್ಮ ಓನರ್ ಮನೆಗೆ ಓಡ್ಬಂದ. ಅವನ್ಗೂ ನನಗೂ ಯಾವಾಗಲೂ ಅಷ್ಟಕ್ಕಷ್ಟೆ. ಕಾಗೇ ಬೆಳ್ಳಂಬೆಳಿಗ್ಗೆ ಒಟ್ಟಿಗೆ ಕೂಗಿದ್ರೆ ಅಪಶಕುನ. ನಿಮ್ಮ ವೈಯಲಿನ್ನಿಂದ ಅವುಗಳಿಗೆ ಬುದ್ಧಿ ಭ್ರಮಣೆಯಾಗಿದೆ. ನೀವು ವೈಯಲಿನ್ ನಿಲ್ಸೋದು ಒಳ್ಳೇದು... ಇಲ್ದಿದ್ರೆ ಪೋಲೀಸ್ನವರ್ನ ಕರೆಯಬೇಕಾಗುತ್ತೆ, ಹಾಗೂ 'ಕ್ರೂಯಲ್ಟಿ ಟು ಅನಿಮಲ್ಸ್' ಸಂಸ್ಥೆಯವರಿಗೂ ಕಂಪ್ಲೇಂಟ್ ಮಾಡ್ತೀನಿ ಎಂದು ಬೆದರಿಸ್ದ. ನನ್ನ ಹೆಂಡ್ತಿ ಇದಕ್ಕೆ ಮೊದಲೇ ಎರಡು ಕಿವೀಗು ಓಲೇ ತರಹ ಹತ್ತಿ ತುರುಕ್ಕೊಂಡಿದ್ಲು. ನಾನು ವೈಯಲಿನ್ನ ಮೂಲೇಗೆಸ್ದು ಹೊರಗ್ಬಂದ್ರೆ ಕಾಗೆಗಳೆಲ್ಲಾ ಸೆಲಿಬ್ರೇಷನ್ ಮಾಡ್ತಿದ್ವು.

ಆವತ್ತು ರಾತ್ರಿಯೆಲ್ಲಾ ನಿದ್ದೆಯಿಲ್ಲ. ಬರೀ ಕೆಟ್ಟ ಕನಸುಗಳೇ..... ನಾನು ಚೌಡಯ್ಯ ಹಾಲ್‌ನಲ್ಲಿ ವೈಯಲಿನ್ ಪರಫಾರ್ಮೆಂನ್ಸ್ ಕೊಡ್ತಾ ಇದ್ರೆ, ಆಡಿಯನ್ಸ್‌ನಲ್ಲಿದ್ದ ಎಲ್ಲಾ ಕಾಗೆಗಳು ಕಾ ಕಾ ಕಾ ಅಂತ ಕೂಗೋ ಹಾಗೆ. ಬೆಚ್ಚಿಬಿದ್ದು ಎದ್ದೆ.

ಮುಂದೇನು ಅಂತ ಯಡ್ಯೂರಪ್ಪನವರ ಹಾಗೆ ಮಾಡದೆ ಆವತ್ತೇ ಡಿಸಿಷನ್ ತೊಗೊಂಡೆ.

ಇದಾದ ವಾರಕ್ಕೆ, ನಾನೇ ನನ್ನ ಹೆಂಡತಿಗೆ, 'ಈರುಳ್ಳಿ ಸಂಡಿಗೆ ಮಾಡು ಚೆನ್ನಾಗಿರುತ್ತೆ' ಅಂದೆ. ಅವಳಿಗೆ ಆಶ್ಚರ್ಯ. ಈರುಳ್ಳಿ ಅಂದ್ರೆ ಮೂಗು ತಿರುಗುಸ್ಕೊಳ್ಳೋವ್ನು ಏನಾಯ್ತಿವರಿಗೆ ಅಂತ.

ಆವತ್ತು ನಾನೆ ಸ್ವತಃ ಸಂಡಿಗೆಯನ್ನು ಟರೇಸ್ನಲ್ಲಿ ಒಣಗ್ಹಾಕಿ, ಕಾಗೆಗಳು ಬಂದಾಗ ಅವುಗಳಿಗೆ ಸುಲಭವಾಗಿ ಸಿಗುವ ಹಾಗೆ ಇನ್ನೊಂದು ತಟ್ಟೆಯಲ್ಲೂ ಹಾಕಿಟ್ಟೆ. ಅವುಗಳು ಸಂತೋಷವಾಗಿ ತಿಂದು ಕುಣಿದು ಅಲ್ಲಲ್ಲೇ ಇಶ್ಶಿ ಮಾಡಿ ಹಾರಾಡಿ ಹೋದವು.

ಆ ಸಂಜೆ ವಾಕಿಂಗ್ ಹೋದಾಗ ಕಾಗೆಗಳು ನಮ್ಮನ್ನ ಎಸ್ಕಾಟ್ ಮಾಡಿದ್ವು. ನನ್ನ ಷರ್ಟಗೇನೂ ಆಪತ್ತು ಬರಲಿಲ್ಲ.

ಈಗ ಸುಖ ಶಾಂತಿ ನೆಮ್ಮದಿ ಹರೀತಾ ಇದೆ ನಮ್ಮನೇಲಿ. ಈಗ ನನಗೂ ಕಾಗೆಗಳ ಭಾಷೆ ಸ್ವಲ್ಪ ಬರುತ್ತೆ.

ಮೊನ್ನೆ ಚಂದನ್ ಕುಮಾರ್ ಅವರ ಕೊಳಲು ಕಛೇರಿಗೆ ಹೋಗಿದ್ದೆ. ಈಗ ನನಗೆ ಕೊಳಲೂದಬೇಕಂತ ಆಸೆ.

# ಸೀನು ಮಾಡಿದ ಪವಾಡ ಏನು?

**- ಶ್ರೀನಿವಾಸ ಕುಂಡಂತಾಯ**

**4ನೇ** ಮಹಡಿಯಲ್ಲಿದ್ದ ಸಿಂಗಲ್ ರೂಂನಲ್ಲಿ ಸೀನು, ಸುಬ್ಬು ವಾಸಿಸುತ್ತಿದ್ದರು. ಸೀನುವಿನಂತೆಯೇ ಸುಬ್ಬುವಿಗೂ ಆತ್ಮವಿಶ್ವಾಸ ಕಡಿಮೆ. ಆತ್ಮವಿಶ್ವಾಸ ಕಡಿಮೆಯಾದಾಕ್ಷಣ ಸಹಜವಾಗಿಯೇ ಮೂಢನಂಬಿಕೆಗಳಿಗೆ ಶರಣಾಗುವ ದೌರ್ಬಲ್ಯ ಎಲ್ಲರಿಗೂ ಇರುತ್ತದೆ. ಹಿಂದಿನ ರಾತ್ರಿ ಸುಬ್ಬು ಹೇಳಿದ್ದ ''ಸೀನು ನಾಳೆ ಪಾರ್ವತಿ ಬೆಟ್ಟಕ್ಕೆ ಶ್ರೀ ಸ್ವರಾನಂದ ಸ್ವಾಮಿಗಳು ಬರ್‍ತಿದ್ದಾರಂತೆ, ಅವರು ಮಂತ್ರಿಸಿ, ಆಶೀರ್ವದಿಸಿ ನಿಂಬೆ ಹಣ್ಣು ಕೊಟ್ಟರೆ ಆ ಭಕ್ತ ನೆನೆಸಿಕೊಂಡಿದ್ದೆಲ್ಲಾ ನೆರವೇರುತ್ತದಂತೆ,'' ನಾವಿಬ್ಬರೂ ನಮ್ಮ ನಮ್ಮ ಸೈಕಲ್‌ಗಳಲ್ಲಿ ಹೋಗಿ ದರ್ಶನ ಮಾಡಿಬರೋಣ, ಎಷ್ಟು ದಿನಾಂತ ನಾವು ಫ್ಯಾಕ್ಟರಿಯಲ್ಲಿ ಸೆಕ್ಯೂರಿಟಿಗಳಾಗಿಯೇ ಕೆಲಸ ಮಾಡ್ತಾ ಇರೋದು ಹೇಳು?

ಸೀನುವಿಗೂ ಅವನ ಮಾತು ಒಪ್ಪಿಗೆ ಆಯಿತು. ರಾತ್ರಿ ಇಡೀ ಏನೇನೋ ಕಲ್ಪನೆ, ಸಣ್ಣ ನಿದ್ದೆ, ಚಿತ್ರ ವಿಚಿತ್ರ ಕನಸುಗಳು ಹೀಗೆ ಸರದಿ ಪ್ರಕಾರ ಬರುತ್ತಲೇ ಇತ್ತು. ಬೆಳಗಾಗುವಾಗ ಒಳ್ಳೆಯ ನಿದ್ರೆ.

ಸುಬ್ಬು ಬೇಗನೆ ಎದ್ದು ಸ್ನಾನ ಮುಗಿಸಿ ಬಂದು ''ಏನೋಲೋ.... ಇನ್ನೂ ಬಿದ್ದುಕೊಂಡೇ ಇದ್ದೀಯಲ್ಲೋ... ಸೀನು ಆಮೇಲೆ ತಡವಾಗಿ ಬಿಟ್ಟರೆ, ಭಕ್ತರ ಸಂಖ್ಯೆ ಹೆಚ್ಚಾಗಿ ಬಿಡುತ್ತೆ. ಆಮೇಲೆ ಶ್ರೀ ಸ್ವರಾನಂದ ಸ್ವಾಮಿಗಳ ದರುಶನ ದೊರಕದೆ ನಿರಾಸೆಯಿಂದ ಬರಬೇಕಾಗುತ್ತೆ ಏಳೋ... ಬೇಗ ರೆಡಿ ಆಗೋ... ಸ್ನಾನ ಮುಗಿಸ್ಕೊಂಡು ಬಾ...'' ಎಂದಾಗಲೇ ಸೀನು ಗಡಿಬಿಡಿಯಿಂದ ಎದ್ದು ಸ್ನಾನಕ್ಕೆ ಹೋದದ್ದು.

ಸೈಕಲ್ ಏರಿ ಸೀನು, ಸುಬ್ಬು ಪಾರ್ವತಿ ಬೆಟ್ಟಕ್ಕೆ ಹೊರಟರು. ಸ್ವಾಮಿಗಳು ಬರುತ್ತಾರೆಂದು ರಸ್ತೆ ರಿಪೇರಿ ಅವಸರವಾಗಿ ಮಾಡಲು ಗ್ರಾಮ ಪಂಚಾಯ್ತಿ, ದಾರಿ ಉದ್ದಕ್ಕೂ ಜಲ್ಲಿ ಕಲ್ಲುಗಳನ್ನು ಹಾಕಿಸಿತ್ತು. ಇನ್ನೂ ಬುಲ್‌ಡೇಜರ್ ಅದರ ಮೇಲೆ ಉರುಳಾಡಿರಲಿಲ್ಲ. ಆದರೆ ಆ ಕಲ್ಲು ಹಾದಿ ತುಳಿದೇ ಭಕ್ತರು ಶ್ರೀ ಸ್ವರಾನಂದ ಸ್ವಾಮಿಗಳ ಪಾದಗಳಲ್ಲಿ ಉರುಳಾಡಲು ಹೊರಟಿದ್ದರು. ಸೀನು, ಸುಬ್ಬುವಿಗೆ ಆ ಕಲ್ಲು ಹಾದಿಯಲ್ಲಿ ಸೈಕಲ್‌ನಲ್ಲಿ ಹೋಗುವುದು ಒಂದು ರೀತಿ ಸರ್ಕಸ್ಸೆಂದೇ ಹೇಳಬಹುದು. ಅಂತೂ ಇಂತೂ ಪಾರ್ವತಿ ಬೆಟ್ಟ ತಲುಪಿಯೇ ಬಿಟ್ಟರು ಸೀನು, ಸುಬ್ಬು.

ಬೆಟ್ಟದ ತುಂಬಾ ಭಕ್ತರ ಸಮೂಹ ಜಮಾಯಿಸಿ ಬಿಟ್ಟಿದೆ. ಶ್ರೀ ಪಾರ್ವತಮ್ಮನವರ ಕಲ್ಲಿನ ಸಣ್ಣ ಗುಡಿಯೊಳಗೆ ಶ್ರೀ ಸ್ವರಾನಂದ ಸ್ವಾಮಿಗಳು ಭಕ್ತರಿಗೆ ದರ್ಶನ ಕೊಡುತ್ತಿದ್ದಾರೆ. ಭಕ್ತರು ಇತ್ತ ಕಾಣಿಕೆಗಳನ್ನು ನಗುಮುಖದಿಂದ ಹುಂಡಿಗೆ ಹಾಕಿಸಿ ಆಶೀರ್ವದಿಸುತ್ತಿದ್ದಾರೆ.

ಬಂದಿದ್ದ ಭಕ್ತರಲ್ಲೇ ಕೆಲವರು ಸ್ವಯಂ ಸೇವಕರಾಗಿ ಭಕ್ತಾದಿಗಳನ್ನು ಸಾಲಾಗಿ ನಿಲ್ಲಿಸುವುದು, ಸರದಿ ಪ್ರಕಾರ ಒಬ್ಬೊಬ್ಬರನ್ನೇ ಶ್ರೀ ಸ್ವರಾನಂದ ಸ್ವಾಮಿಗಳ ದರ್ಶನಕ್ಕಾಗಿ ಶ್ರೀ

ಪಾರ್ವತಮ್ಮನವರ ಗುಡಿ ಒಳಕ್ಕೆ ಕಳುಹಿಸುವುದು ಮುಂತಾದ ಕೆಲಸಗಳನ್ನು ನಿರ್ವಹಿಸುತ್ತಲಿದ್ದಾರೆ.

ಕೊನೆಗೂ ಕಾದು, ಕಾದು, ಸೋತು ಅಂತೂ ಸೀನು, ಸುಬ್ಬುವಿಗೂ ಶ್ರೀ ಸ್ವರಾನಂದ ಸ್ವಾಮಿಗಳ ದರ್ಶನ ಭಾಗ್ಯ ದೊರಕಿ ಬಿಟ್ಟಿತು. ಸ್ವಾಮಿಗಳು ಮುಗುಳ್ನಗುತ್ತಾ ಸೀನು, ಸುಬ್ಬುರನ್ನು ಆಶೀರ್ವದಿಸಿದರು. ಇಬ್ಬರಿಗೂ ಒಂದೊಂದು ನಿಂಬೆಹಣ್ಣು ಅನುಗ್ರಹಿಸಿದರು. ''ನಂಬಿಕೆ, ಶ್ರದ್ಧೆ, ಭಕ್ತಿ ಮುಖ್ಯವಾಗಿ ಇರಬೇಕು, ಅನುಮಾನಿಸಿದರೆ, ಅಪಮಾನಿಸಿದಂತೆ, ಪೂರ್ಣ ನಂಬಿಕೆಯಿಂದ ನಿಂಬೆಹಣ್ಣನ್ನು ನಿತ್ಯ ಪೂಜಿಸಿ, ನಿಮ್ಮ ಶ್ರದ್ಧೆ ಉತ್ತಮ ಮಟ್ಟದ್ದಾಗಿದ್ದರೆ ಆ ನಿಂಬೆ ಹಣ್ಣು ಪುಟ್ಟ ಗಣಪತಿಯಾಗಿ ರೂಪುಗೊಳ್ಳುತ್ತದೆ. ತದನಂತರ ನಿಮ್ಮ ಅಭೀಷ್ಟಗಳೆಲ್ಲ ಸಿದ್ಧಿಸುತ್ತದೆ, ಹೋಗಿ ಬನ್ನಿ... ನಾನು ಸರ್ವಸಂಗ ಪರಿತ್ಯಾಗಿ.... ಹಣವನ್ನು ಕೈಯಿಂದ ಮುಟ್ಟುವವನಲ್ಲ ''ಶ್ರೀ ಸ್ವರಾನಂದ ಭಜನಾ ಭಕ್ತ ಮಂಡಲಿ ಹುಂಡಿ'' ಅಲ್ಲಿಟ್ಟಿದೆ ಅದರಲ್ಲಿ ನಿಮಗೆ ತೋಚಿದಷ್ಟು ಹಣ ಹಾಕಿ ಹೋಗಿ...'' ಎಂದು ಅಪ್ಪಣೆ ಕೊಡಿಸಿದರು.

ಕೃತಾರ್ಥರಾದೆವೆಂದು ಸೀನು, ಸುಬ್ಬು ಅಂದುಕೊಂಡರು. ಭಯ ಭಕ್ತಿಗಳಿಂದ ನಿಂಬೆಹಣ್ಣನ್ನು ಮೇಲಿನ ಕಿಸೆಯಲ್ಲಿಟ್ಟುಕೊಂಡು ಪಾರ್ವತಿ ಬೆಟ್ಟದಿಂದ ತಮ್ಮ ತಮ್ಮ ಸೈಕಲ್‌ಗಳನ್ನೇರಿ ತಮ್ಮ ಊರಿಗೆ ಹೊರಟರು ಸೀನು, ಸುಬ್ಬು

ಇಬ್ಬರೂ ಸೈಕಲ್ ಪೆಡಲ್ ಮಾಡುತ್ತಾ ಕಲ್ಲುಗಳ ಮೇಲೆ ಜಗ್ಗ ಮಗ್ಗಿ ಆಡುವಂತೆ ಹೋಗುತ್ತಿದ್ದರು. ಮನಸ್ಸಿನಲ್ಲಿ ಏನೇನೋ ಆಶಾ ಭಾವನೆ. ನಿಂಬೆಹಣ್ಣನ್ನು ಪೂಜಿಸಿ ಅದು ಗಣಪತಿಯಾಗಿ ಮಾರ್ಪಟ್ಟಂತೆ ಕಲ್ಪನೆ. ತಮ್ಮ ತಮ್ಮ ಅಭಿಲಾಷೆಗಳ ಈಡೇರಿಕೆಗಳ ಮೆರವಣಿಗೆ ಮೆದುಳಿನಲ್ಲಿ ಸಾಗಿತ್ತು. ಸುಬ್ಬುವಿನ ಸೈಕಲ್ ಟೈರ್ ಕಲ್ಲುಗಳ ನಡುವೆ ಜಾರಿದಂತಾಗಿ, ಎದ್ದ ಒಂದು ಕಲ್ಲು ರಭಸದಿಂದ ಸೀನುವಿನ ಸೈಕಲ್‌ನ ಫೋರ್ಕ್ಸ್‌ಗೆ ಬಡಿಯಿತು. ರಭಸದಿಂದ ಹೊರಕ್ಕೆ ಬಂದ ಸೈಕಲ್ ಚಕ್ರದ ಪೋಕ್ಸು ಸೀನುವಿನ ಪೆಡಲ್ ಮಾಡುತ್ತಿದ್ದ ಪಾದದ ಬೆರಳುಗಳ ಅಡಿಗೆ ನುಗ್ಗಿ ಸಿಕ್ಕಿ ಹಾಕಿಕೊಂಡು ಆಳವಾದ ಗಾಯ ಏರ್ಪಡಿಸಿತು. ಸಹಾಯ ಕೇಳಲು ಸುತ್ತ ಮುತ್ತಲು ಹತ್ತಿರದಲ್ಲಿ ಯಾರೂ ಇಲ್ಲ, ನಿರ್ಜನ ಪ್ರದೇಶ. ರಕ್ತ ಸುರಿಯುತ್ತಿರುವಂತೆಯೇ ಅದಾವುದೋ ಶಕ್ತಿಯಿಂದ ವೇಗವಾಗಿ ಸೀನು, ಸುಬ್ಬು ಪ್ರಯಾಣ ಮುಂದುವರೆಸಿ ತಮ್ಮ ಊರನ್ನು ಸೇರಿಕೊಂಡರು.

ಡಾಕ್ಟರ್ ಬಳಿಗೆ ಹೋದ ಸೀನನಿಗೆ ಚಿಕಿತ್ಸೆ ಮಾಡಿ, ಗಾಯಗಳಿಗೆ ಹೊಲಿಗೆ ಹಾಕಿ, ಬ್ಯಾಂಡೇಜ್ ಮಾಡಿ ಆಂಟಿಟೆಟನಸ್ ಇಂಜಕ್ಷನನ್ನು ಕೊಟ್ಟು ಮಾತ್ರೆ ಒಂದಷ್ಟು ಬರೆದು ಕೊಟ್ಟರು.

ಈ ಗಾಯ, ನೋವು ಯಾತನೆಯ ನಡುವೆಯೂ ಶ್ರದ್ಧಾಭಕ್ತಿಗಳಿಂದ ಏಕಾಗ್ರತೆಯಿಂದ ನಿಂಬೆ ಹಣ್ಣನ್ನು ಸೀನು ಪೂಜಿಸುತ್ತಾ ಬಂದ. ಸುಬ್ಬು ಸಹ ನಿಂಬೆ ಹಣ್ಣಿಗೆ ಪೂಜೆ ಮಾಡುತ್ತಿದ್ದ. ದಿನವೂ ಬೆಳಿಗ್ಗೆಯಾದ ತಕ್ಷಣ ಎದ್ದು ಹೋಗಿ ನಿಂಬೆ ಹಣ್ಣು ಗಣಪತಿ ಆಗಿ ಮಾರ್ಪಟ್ಟಿತಾ ಅಂತ ನೋಡುವುದು ಸೀನು, ಸುಬ್ಬುವಿನ ಮೊದಲ ಕೆಲಸ.

ಒಂದು ದಿನ ಬೆಳಿಗ್ಗೆ ಸೀನುವಿಗೆ ಒಳ್ಳೆಯ ನಿದ್ದೆ. ಸುಬ್ಬು ಬಂದು ''ಏಳೋ... ಸೀನು... ನನ್ನ ನಿಂಬೆಹಣ್ಣು ಗಣಪತಿಯಾಗಿ ಬಿಟ್ಟಿದೆ.....'' ಬೇಗ ಬಂದು ನೋಡೋ....

''ಹೋಗಲೋ... ಭಾನುವಾರ ಬೆಳಿಗ್ಗೆ ಡ್ಯೂಟಿಯಿಲ್ಲ..... ಆರಾಮವಾಗಿ ನಿದ್ದೆ ಮಾಡಿ ಆಮೇಲೆ ಏಳ್ತೀನಿ... ತೊಂದರೆ ಕೊಡಬೇಡ.''

''ನಿನ್ನ ನಿಂಬೆಹಣ್ಣು ಹಾಗೇ ಇದೆ.... ನನ್ನ ನಿಂಬೆಹಣ್ಣು ಗಣಪತಿ ಆಗ್ಬಿಟ್ಟಿದೆ.. ಏನಾಶ್ಚರ್ಯ!?''

''ಆ ಪುಟ್ಟ ಗಣಪತಿ ಮೂರ್ತಿಗೆ ಎಷ್ಟು ಕೊಟ್ಟು ತಕೊಂಬಂದೆ?''

''ನೋಡು, ನೋಡು, ಇದನ್ನೆ ಬೇಡಾ ಅನ್ನೋದು. ನಿನ್ನ ನಿಂಬೆಹಣ್ಣು ಗಣಪತಿ ಆಗಲಿಲ್ಲಾಂತ ಕಿಚ್ಚಿಗೆ, ನಾನು ಗಣಪತಿ ಹಣಕೊಟ್ಟು ತಂದಿದೀನಿ ಅಂತ ಹೇಳ್ತಾ ಇದೀಯಾ?''

''ಮುಚ್ಕೋ..... ಮಗನೆ...... ರಾತ್ರಿಯೆಲ್ಲಾ ನಿದ್ದೆ ಇರಲಿಲ್ಲ ನಂಗೆ. ಆದ್ರೆ ಆಯಾಸಕ್ಕೆ ಕಣ್ಮುಚ್ಚಿಕೊಂಡೇ ಇದ್ದೆ. ನಾನು ನಿದ್ದೆ ಹೋಗಿದೀನಿ ಅಂತ ನೀನು ಬ್ಯಾಗಿಂದ ಗಣಪತಿ ಮೂರ್ತಿ ಹೊರಕ್ಕೆ ತೆಗೆದದ್ದು, ಕಳ್ಳ ಹೆಜ್ಜೆ ಹಾಕ್ಕೊಂಡು ಒಳಗೆ ರೂಂಲಿದ್ದ ಒಣಗಿದ ನಿಂಬೆಹಣ್ಣು ಕಿಟಕಿಯಿಂದ ಆಚೆಗೆ ಬಿಸಾಡಿದ್ದು, ಈ ಜಾಗದಲ್ಲಿ ಗಣಪತಿ ಮೂರ್ತಿ ಇಟ್ಟು ತಲೆಗೆ ಹೂ ಇಟ್ಟಿದ್ದು, ಈಗ ನನ್ನ ಕಿವಿಗೆ ಹೂವಿಡಲು ಬಂದದ್ದು ಎಲ್ಲಾ ನೋಡಿದೀನಿ ಕಣೋ.....''

''ಥೂ.... ನಿನ್ನ.... ಸ್ನೇಹಿತನಿಗೇ ಮೋಸ ಮಾಡೋಕೆ ನೋಡ್ತಿಯಲ್ಲೋ. ನೀನೇನೋ ಮಹಾ ಭಕ್ತ ಆದ್ದರಿಂದ ನಿಂಬೆ ಗಣಪತಿ ಆಯ್ತು, ತನಗೆ ಪವಾಡ ಜರುಗಿತು ಅಂತ ತಿಳಿಸಿ, ಬೇರೆಯವರಿಗಿಂತ ತಾನು ಶ್ರೇಷ್ಠ ಅನ್ನಿಸ್ಕೊಳ್ಳೋಕೆ ಜನ ಇಷ್ಟ ಪಡ್ತಾರೆ. ಉಳಿದವರು ಅಯ್ಯೋ..... ನನ್ನ ದುರಾದೃಷ್ಟ, ದೇವರ ಕೃಪೆ ಆಗಲಿಲ್ಲಾಂತ ಸುಮ್ನೆ ನೊಂದ್ಕೊಳ್ಳೋ ತರ ಮಾಡ್ತೀರಿ'' ಮಹಾ ಮೋಸಗಾರರು ನೀವು.

ಸುಬ್ಬು ಉತ್ತರ ಕೊಡಲು ತಿಣುಕಾಡಿದ, ತಾನು ಹೇಳಿದ್ದು ಸುಳ್ಳೆಂದು ಅವನಿಗೂ ಗೊತ್ತಿತ್ತು.

ಸೀನು ಬೇಸರದಿಂದ ಎದ್ದು ತಾನು ಇಷ್ಟು ದಿನ ಏಕಾಗ್ರತೆಯಿಂದ, ಪರಿಪೂರ್ಣ ನಂಬಿಕೆಯಿಂದ, ಶ್ರದ್ಧೆಯಿಂದ, ಭಕ್ತಿಯಿಂದ ವ್ಯರ್ಥವಾಗಿ ಪೂಜಿಸಿದ ನಿಂಬೆ ಹಣ್ಣನ್ನು ಕೈಗೆ ಎತ್ತಿಕೊಂಡ, ಸತ್ವ, ರಸ ಎಲ್ಲಾ ಕಾಣೆಯಾಗಿ, ಅನೇಕ ನೆರಿಗೆಗಳ ಒಣಗಿದ ಗಟ್ಟಿ ನಿಂಬೆ ಹಣ್ಣಾಗಿ ಅದು ಮಾರ್ಪಟ್ಟಿತ್ತು. ''ತಕೊಂಡು ಬಂದ ದಿನವೇ ಸ್ವಲ್ಪ ಸಕ್ಕರೆ, ನೀರು ಬೆರೆಸಿ ಪಾನಕ ಮಾಡಿಕೊಂಡು ಕುಡಿದಿದ್ದರೆ ಚೆನ್ನಾಗಿತ್ತು.'' ಅಂದುಕೊಂಡ ಇದನ್ನು ಕೊಟ್ಟ ಆ ಕಳ್ಳಸ್ವಾಮಿ ತಲೆಗೇ ಗುರಿಯಿಟ್ಟು ಎಸೆಯುತ್ತಿರುವಂತೆ ಕಲ್ಪಿಸಿಕೊಂಡು ಸೀನು ಆ ಒಣಗಿದ ನಿಂಬೆಹಣ್ಣನ್ನು ತನ್ನೆಲ್ಲ ಶಕ್ತಿ ಪ್ರಯೋಗಿಸಿ ಹೊರಕ್ಕೆ, ದೂರಕ್ಕೆ ಎಸೆದ. ಈಗ ಸೀನು ಮನಸ್ಸಿಗೆ ಏನೋ ಶಾಂತಿ, ಸಮಾಧಾನ ದೊರಕಿದಂತೆ ಆಯಿತು. ಏನೋ ಭಾರ ಕಳೆದುಕೊಂಡವನಂತೆ ತೃಪ್ತಿಯ ನಗೆ ನಕ್ಕ.

ಸೀನುವಿನ ದೂರದ ನೆಂಟರ (ಅದು ಹ್ಯಾಗ್ ಹ್ಯಾಗೋ ಸಂಬಂಧಗಳನ್ನು ಲೆಕ್ಕಾಚಾರ ಮಾಡಿ ನೋಡಿದಾಗ ಭಾವ ಆಗ್ತಾನೆ) ಮಗ ಪ್ರದ್ಯುಮ್ನ ಸೀನುವನ್ನು ನೋಡಲು ಬಂದ. ಸುಬ್ಬು ಡ್ಯೂಟಿಗೆ ಹೋಗಿದ್ದ. ಸೀನುಗೆ ಇಂದು ರಾತ್ರಿ ಡ್ಯೂಟಿ ಇತ್ತು.

ಪ್ರದ್ಯುಮ್ನ ಓದಿನಲ್ಲಿ ಬಹಳ ಹಿಂದೆ ಬಿದ್ದಿದ್ದ. ಸಿಟ್ಟಿನ ಅವತಾರವಾಗಿದ್ದ ಪ್ರದ್ಯುಮ್ನನ ತಂದೆ (ಅದೇ ಉತ್ತರ ಧ್ರುವ ದಕ್ಷಿಣಧ್ರುವ ಭಾವನೆಂಟ) ಪ್ರದ್ಯುಮ್ನನನ್ನು ಮನೆ ಬಿಟ್ಟು ಹೊರಗೋಡಿಸಿದ್ದು ಗೊತ್ತಾಗಿತ್ತು.

ಬಹುಷಃ ಪ್ರದ್ಯುಮ್ನ ತನ್ನ ಸಹಾಯ ಕೇಳಲು ಬಂದಿರಬೇಕೆಂದು ಸೀನು ಅಂದುಕೊಂಡ. ''ಏನು ಪ್ರದ್ಯುಮ್ನ.... ಬಹಳ ಸಮಯ ಆದ್ಮೇಲೆ..... ನನ್ನನ್ನು ನೋಡೋಕೆ ಬಂದಿದೀಯಾ?''

''ತುಂಬಾ ದಿನ ಆಯ್ತು..... ನಿಮ್ಮನ್ನ ಒಂದ್ಸಾರಿ ನೋಡಿ ಹೊಗೋಣಂತ ಬಂದೆ.''

''ಸರಿ ನಿನ್ನ ಮನೆಯಿಂದ ಆಚೆ ಹಾಕಿದ್ನಲ್ಲಾ ಭಾವ..... ನೀನು ಇಷ್ಟು ದಿನಗಳು ಎಲ್ಲಿ? ಹೇಗೆ? ಇದ್ದೆ?''

ಅದೊಂದು ದೊಡ್ಡ ಕತೆ. ''ಅಪ್ಪ ಆಚೆಗೆ ಹಾಕಿದ್ನಾ.... ಕಾಲು ಎಳೆದ ಕಡೆ ನಡೀತಾ ಹೋದೆ.... ಹಾಳು ಮಂಟಪದಲ್ಲಿ ಮಲಗಿ, ದೇವಸ್ಥಾನದ ಪ್ರಸಾದದಿಂದ ಹೊಟ್ಟೆ ಹೊರೆದುಕೊಂಡು ಇದ್ದೆ. ಎಲ್ಲೂ ಕೆಲಸ ಸಿಗಲಿಲ್ಲ, ಮುಖ್ಯವಾಗಿ ನನಗೇ ಯಾವ ಕೆಲ್ಸ ಗೊತ್ತಿರಲಿಲ್ಲ.''

''ಆಮೇಲೆ?...''

ಒಂದು ದಿನ ಒಂದು ದೊಡ್ಡ ಮೆರವಣಿಗೆ ಬರ್ತಾ ಇತ್ತು. ನೋಡಿದ್ರೆ ಶ್ರೀ ಸ್ವಾಮಿ ಸ್ವರಾನಂದರ ಮೆರವಣಿಗೆ, ಭಕ್ತ ಸಮೂಹದ ಜೊತೆ ನಾನು ಸೇರಿಕೊಂಡು ಮಠ ತಲುಪಿದೆ. ಹೇಗೆ ಹೇಗೋ ಕಷ್ಟಪಟ್ಟು ಶ್ರೀ ಸ್ವರಾನಂದ ಸ್ವಾಮಿಗಳನ್ನು ಏಕಾಂತದಲ್ಲಿ ದರ್ಶನ ಪಡೆದು, ಅವರ ಪಾದಗಳಿಗೆ ಶರಣಾಗಿ ಬಿಟ್ಟೆ ''ಏಳು ಮಗು, ಏಳು...'' ಎಂದು ತಲೆಯಿಂದ ನನ್ನ ಕುಂಡಿಯತನಕ ನಯವಾಗಿ ತಮ್ಮ ದಿವ್ಯ ಹಸ್ತವನ್ನು ಸವರುತ್ತಾ ಶ್ರೀ ಸ್ವರಾನಂದ ಸ್ವಾಮಿಗಳು ನನಗೆ ಅಭಯವಿತ್ತರು.

''ನನಗಾರೂ ಗತಿಯಿಲ್ಲ, ನಿಮ್ಮನ್ನೇ ನಂಬಿ ಬಂದಿದ್ದೇನೆ'' ಅಂದೆ.

ಒಂದು ರೀತಿಯ ನೋಟದಿಂದ ನನ್ನನ್ನು ಪಾದದಿಂದ ತಲೆ ತನಕ ಆತ್ಮೀಯವಾಗಿ ನೋಡಿದ ಶ್ರೀಗಳು ''ನೀನು ನನಗೆ ಶರಣಾದೆ, ಶರಣಾದ ಭಕ್ತನಿಗೆ ನಾನೂ ಶರಣಾದೆ. ನನ್ನ ಏಕಾಂತ ಸೇವೆಗೆ ನಿನ್ನನ್ನು ನೇಮಿಸಿಕೊಂಡಿದ್ದೇನೆ. ಇಂದಿನಿಂದ ನನ್ನ ಜೊತೆ ಯಾವಾಗಲೂ ನೀನು ಇರುತ್ತೀಯ.... ಚಿಂತಿಸಬೇಡ ಮಗು..'' ಅಂದರು.

ಅಂದಿನಿಂದ ನನಗೆ ಪುಷ್ಟಿಯುತ ಆಹಾರಗಳು, ಹಣ್ಣು, ಹಂಪಲು, ಬಾದಾಮಿ ಹಾಲು, ಎಲ್ಲಾ ದೊರಕುತ್ತಿತ್ತು. ಶ್ರೀ ಸ್ವಾಮಿಗಳ ಒಳಉಡುಪುಗಳನ್ನು ಒಗೆದು ಒಣಗಿಸಿಡುವುದು. ಅವರು ಮಂಚದಿಂದ ಕೆಳಗಿಳಿಯುವಾಗ ಪಾದುಕೆಗಳನ್ನು ಇರಿಸುವುದೇ ಮುಂತಾದ ಕೆಲಸ ಮಾಡುತ್ತಿದ್ದೆ.

ಶ್ರೀ ಸ್ವಾಮಿಗಳಿಗೆ ಕಾವಲಾಗಿ ಅವರ ಕೋಣೆಯಲ್ಲಿ ನಾನೂ ಪವಡಿಸುತ್ತಿದ್ದೆ.

ಅಂತೂ ''ಸುಭದ್ರವಾದ ಜೀವನ'' ನಿನಗೆ ದೊರಕಿತು ಅನ್ನು.

ನಾನೂ ಹಾಗೇ ಅನ್ಕೊಂಡಿದ್ದೆ.... ''ದಯವಿಟ್ಟು ಯಾರಿಗೂ ಹೇಳಬೇಡಿ...'' ಆಮೇಲೆ ನಡೆದ ಘಟನೆಯಿಂದಾಗಿ ನಾನು ನಿಮ್ಮಲ್ಲಿಗೆ ಬಂದೆ. ಏನಾಯಿತೆಂದರೆ, ದಿನದಿಂದ ದಿನಕ್ಕೆ ಶ್ರೀಗಳ ಪ್ರೀತಿ ನನ್ನ ಮೇಲೆ ಅಧಿಕರಿಸಿತು. ಹಾಲು ಹಣ್ಣು ಪುಷ್ಟಿಯ ಆಹಾರ ಸೇವಿಸಿ ನನ್ನ ಶರೀರವೂ ಎಲ್ಲ ಕಡೆ ಪುಷ್ಟಿಕರವಾಗಿ ಬೆಳೆಯಿತು. ಬಣ್ಣವೂ ಬಂತು.

ಒಂದು ದಿನ ರಾತ್ರಿ ಏಕಾಂತದಲ್ಲಿ ಶ್ರೀ ಸ್ವರಾನಂದ ಸ್ವಾಮಿಗಳೇ ಕೈಯಾರೆ ''ಬಾದಾಮಿ ಹಾಲು'' ಕುಡಿಸಿದರು. ಸ್ವಲ್ಪ ಹೊತ್ತಿನ ನಂತರ ನನಗೆ ಅರ್ಧ ಎಚ್ಚರ, ಅರ್ಧ ಮಂಪರು. ತುಂಬಾ ನಿಶ್ಯಕ್ತಿ ಅನ್ನಿಸಿತು. ನಿದ್ದೆ ಜೋರು ಬರುವಂತಾಯಿತು. ಬೋರಲಾಗಿ ಮಲಗಿ ಬಿಟ್ಟೆ

''ಯಾವುದೋ ಅದ್ಭುತ ಶಕ್ತಿ ಮೈ ಮೇಲೆ ಬಿದ್ದಂತೆ ಏನೋ ಭಾರದ ಅನುಭವ. ಪರಿಚಿತವಾದ ವಿಭೂತಿ ಪರಿಮಳ. ದೈವೀಕ ಶಕ್ತಿ ಯಾವುದೋ ನಯವಾಗಿ ಬಿಸಿಯಾಗಿ, ಬಿರುಸಾಗಿ ನನ್ನ ಹಿಂಬದಿಯಿಂದ ದೇಹ ಪ್ರವೇಶಿಸುತ್ತಿದೆ ಎಂಬ ಯಾತನೆ ವೇದನೆ. ಈ ಅದ್ಭುತ ಪವಾಡ ಸದೃಶ ಶಕ್ತಿಗಳಿಗೆ ದೇಹವನ್ನು ಸೇರಲು ದೇಹದ ಬೇರೆ ಭಾಗಗಳು ಲಾಯಕ್ಕಲ್ಲವೇ ಎಂದು ಮಂಪರಿನಲ್ಲೂ ಚಿಂತನೆ, ಬಿರುಸುತನ, ಬಿಸಿ, ವೇಗ ಎಲ್ಲಾ ಸೋತು ಸೊರಗಿದಂತೆ ಅನಿಸಿಕೆ. ನಂತರ ಗಾಢನಿದ್ದೆ. ಬೆಳಿಗ್ಗೆ ಎಚ್ಚರವಾಗಿ ಹೊರಗೆ ಬಂದರೆ ಕೆಟ್ಟ ಸ್ವರದಲ್ಲಿ ಸ್ವರಾನಂದ ಭಕ್ತ ಕೋಟಿಗೆ ಭಜನೆ ಹಾಡಿಸುತ್ತಿದ್ದ. ಅವ್ವೈ ಶಣ್ಮುಖಿ ಸಿನಿಮಾದಲ್ಲಿ ಜೆಮಿನಿ ಗಣೇಶನ್, ಹೆಂಗಸಿನ ವೇಷ ಧರಿಸಿದ್ದ ಕಮಲ್ ಹಾಸನ್‌ನನ್ನು ಒಂಥರಾ ನೋಡುತ್ತಾನಲ್ಲ ಹಾಗೆ ನನ್ನನ್ನೊಮ್ಮೆ ನೋಡಿ ನಕ್ಕ. ಮುಖಕ್ಕೆ ಉಗುಳಬೇಕೆನಿಸಿತು. ಅವನ ಮುಖದಲ್ಲಿ ಅಪರಾಧಿ ಪ್ರಜ್ಞೆಯ ಚಿಹ್ನೆ ಲವಲೇಶವೂ ಇರಲೇ ಇಲ್ಲ. ಸಾಕ್ಷಾತ್ ದೇವರೇ ಅಯೋನಿಜನಾಗಿ ಧರೆಗೆ ಅವತರಿಸಿ ಬಂದವನಂತೆ ಭಕ್ತರಿಗೆ ಫೋಸ್ ಕೊಡುತ್ತಿದ್ದ ಬಡ್ಡಿ ಮಗ.''

ಅಲ್ಲಿಂದ ಓಡಿ ಹೊಗಲು ಪ್ರಯತ್ನ ಮಾಡಿದೆ. ಸ್ವರಾನಂದನ ಗೂಂಡಾಗಳು ಅಟ್ಟಿಸಿಕೊಂಡು ಬಂದರು. ಹೇಗೋ ತಪ್ಪಿಸಿಕೊಂಡು ಬಂದುಬಿಟ್ಟೆ. ನಿಮ್ಮ ನೆನಪಾಯಿತು. ನಿಮ್ಮಲ್ಲಿಗೆ ಬಂದೆ, ನಿಂತೇ ಇದ್ದೇನೆ. ನಿನ್ನೆಯ ಘಟನೆಯಿಂದಾಗಿ ನೆಲಕ್ಕೆ ಒರಗಿಸಿ ಆಸನವನ್ನು ಇಡಲಾಗುತ್ತಿಲ್ಲ. ಹಾಗಾಗಿ ನಿಂತಿದ್ದೇನೆ ಎಂದು ಹೇಳಿ ಮುಗಿಸಿದ ಪ್ರದ್ಯುಮ್ನ.

''ನಿನಗೆ ನಮ್ಮ ಫ್ಯಾಕ್ಟರಿಯಲ್ಲಿ ಉದ್ಯೋಗ ಕೊಡಿಸುತ್ತೇನೆ ನಮ್ಮ ಜೊತೆ ನಮ್ಮ ರೂಂನಲ್ಲಿಯೇ ಇರು'' ಎಂದು ಭರವಸೆ ಇತ್ತೆ.

ಹೊರಗೆ ವಾದ್ಯಗಳ ಶಬ್ಧ, ಭಜನೆ, ಜಯಘೋಷ ಕೇಳಿ ಸೀನು, ಪ್ರದ್ಯುಮ್ನ ಬಿಲ್ಡಿಂಗ್‌ನ ತುದಿಮಾಳಿಗೆ ಮೇಲೆ ಹತ್ತಿ ನೋಡಿದೆವು. ಶ್ರೀ ಸ್ವರಾನಂದ ಸ್ವಾಮಿ ಆನೆ ಮೇಲೆ ಅಂಬಾರಿಯಲ್ಲಿ ಕುಳಿತು ಎರಡೂ ಕೈಗಳಿಂದ ಆಶೀರ್ವದಿಸುತ್ತಾ ಇದ್ದಾನೆ. ಯಾರಿಗೂ ಅವರು ಇಷ್ಟು ಎತ್ತರದಲ್ಲಿ ನಿಂತು ನೋಡುತ್ತಿರುವುದು ಕಾಣದಂತಹ ಜಾಗದಲ್ಲಿ ಸೀನು, ಪ್ರದ್ಯುಮ್ನ

ನಿಂತಿದ್ದರು. ಸೀನುವಿಗೆ ತಕ್ಷಣ ಏನೋ ಆಲೋಚನೆ ಹೊಳೆಯಿತು. ಸ್ವಲ್ಪ ಇಲ್ಲೇ ಇರು ಬಂದೆ ಎಂದು ಅಲ್ಲಿಂದ ರೂಂಗೆ ಬಂದ. ಕಳೆದ ವರ್ಷ ದೀಪಾವಳಿಗೆ ತಂದಿದ್ದ ಸಾವಿರ ಸರ ಪಟಾಕಿಯ ಕಟ್ಟೊಂದು ಉಳಿದಿತ್ತು. ಪೆಟ್ಟಿಗೆಯಿಂದ ಅದನ್ನು ಸೀನು ಹೊರತೆಗೆದ, ಬೆಂಕಿ ಪೊಟ್ಣ ಜೊತೆಯಲ್ಲಿ ತಕೊಂಡು ತುದಿಮಾಳಿಗೆಗೆ ಬಂದು, ಮರೆಯಾದ ಜಾಗದಲ್ಲಿ ನಿಂತ. ಶ್ರೀ ಸ್ವರಾನಂದನನ್ನು ಹೊತ್ತ ಅಂಬಾರಿಯ ಆನೆ ಇವರು ನಿಂತ ಬಿಲ್ಡಿಂಗ್ ಹತ್ತಿರ ಬಂದ ತಕ್ಷಣ ಪಟಾಕಿಯ ಬತ್ತಿಗೆ ಬೆಂಕಿ ಹಚ್ಚಿ ತಕ್ಷಣ ಆನೆಯ ಕಾಲಿನ ಹತ್ರ ಬೀಳುವಂತೆ ಪಟಾಕಿಯ ಉಂಡೆ ಬಿರುಸಿನಿಂದ ಒಗೆದ, ಪಟಾಕಿ ಡಮಾರ್ ಡಮಾರ್ ಡಮಾರ್ ಅಂತ ಸಿಡಿಯಲಾರಂಭಿಸಿತು. ಆನೆ ನಾಗಾಲೋಟದಿಂದ ಹುಚ್ಚೆದ್ದು ಓಡಲಾರಂಭಿಸಿತು. ಅಂಬಾರಿ ಕೆಳಗೆ ಬಿತ್ತು. ಒಳಗಿದ್ದ ಸ್ವರಾನಂದ ಸ್ವಾಮಿ ನೆಲದಲ್ಲಿ ಬಿದ್ದ ಆನೆಯ ಮುಂದಿನ ಹೆಜ್ಜೆ ಅವನ ಮೇಲೆ ಇಟ್ಟಿತು. ಪವಾಡ ಪುರುಷನ ಒಡಲೊಳಗಿದ್ದೆಲ್ಲಾ ಹೊರಗೆ ಬಂತು. ಭಕ್ತ ಕೋಟಿ ಬದುಕಿದೆಯಾ ಬಡ ಜೀವ ಅಂತ ಅವರವರ ಜೀವ ಕಾಪಾಡಿಕೊಳ್ಳಲು ಆನೆಯಿಂದ ತಪ್ಪಿಸಿಕೊಳ್ಳಲು ಓಡುತ್ತಿದ್ದರು. ಏನಾಗುತ್ತಿದೆ? ಹೇಗಾಯಿತು? ಎಂದು ಯಾರಿಗೂ ತಿಳಿಯದಾಗಿತ್ತು. ಅಷ್ಟೊಂದು ಮಂದಿ ಮುಗ್ಧ ಜೀವಿಗಳ ಹಣವನ್ನು ಗೋರಿಕೊಂಡು, ಅವರುಗಳ ದೌರ್ಬಲ್ಯಗಳನ್ನೇ ತನ್ನ ಬಂಡವಾಳ ಮಾಡಿಕೊಂಡು, ರಾಜಕಾರಣಿಗಳಿಗಿಂತಲೂ ಹೀನವಾಗಿ ಇಹಲೋಕ, ಪರಲೋಕ ಎರಡರಲ್ಲೂ ಪರದಾಡುವಂತೆ ಮಾಡಿ ತನ್ನನ್ನು ನಂಬಿ ಬಂದವರಿಗೆ ಹೊರಗೊಂದು ದೈವೀಕ ಶಕ್ತಿಯ ಅವತಾರವೆಂಬಂತೆ ಒಂದು ಮುಖ ತೋರಿ, ಒಳಗೊಳಗೆ ಗುಟ್ಟಾಗಿ ಅತ್ಯಂತ ಪಾಪದ ಕೃತ್ಯಗಳನ್ನು ಯಾರ ಭಯವೂ ಇಲ್ಲದೆ ಮಾಡುತ್ತಿದ್ದ ಸ್ವರಾನಂದನ ಕೆಟ್ಟ ಶ್ರುತಿಯ ಸ್ವರ ಅಡಗಿ ಹೋಯಿತು. ಭಕ್ತರ ಮನದಲ್ಲಿ ಒಡಲಲ್ಲಿ ಗುಟ್ಟಾಗಿ ತನ್ನ ಕೆಟ್ಟ ಬೀಜವನ್ನು ಬಿತ್ತುವ ರಕ್ತ ಬೀಜಾಸುರರಂತಹ ಅಥವಾ ಪಾರ್ಥೇನಿಯಂ ಕಳೆಗಳಂತಹ ಸ್ವಾಮಿಗಳಲ್ಲಿ ಒಬ್ಬನನ್ನಾದರೂ ಹೀಗೆ ಮುಗಿಸಿ ತನ್ನ ಜನ್ಮ ಸಾರ್ಥಕವಾಯಿತೆಂದು ಸೀನು ಅಂದುಕೊಂಡ. ತನ್ನ ಕಣ್ಣೆದುರೇ ನಡೆದ ಈ ಎಲ್ಲ ದೃಶ್ಯ ನೋಡಿದ ಪ್ರದ್ಯುಮ್ನಗೆ ಅವರ್ಣನೀಯ ಆನಂದವಾಯಿತು. ತೃಪ್ತಿಯಿಂದ ಅಲ್ಲೇ ಕೆಳಗೆ ಕುಳಿತ. ಏನು ಪವಾಡ?! ನೋವು ಮಾಯವಾಗಿತ್ತು. ಸೀನು ಮಾಡಿದ ಪವಾಡ ಏನು ಎಂಬುದು ಪ್ರದ್ಯುಮ್ನನಿಗೆ ಮಾತ್ರ ಗೊತ್ತಿತ್ತು. ಪ್ರದ್ಯುಮ್ನನನ್ನು ಕರೆದುಕೊಂಡು ಸೀನು ತನ್ನ ಫ್ಯಾಕ್ಟರಿ ಮ್ಯಾನೇಜರ್ ಬಳಿಗೆ ಕೆಲಸ ಕೊಡಿಸಲು ಕರೆದುಕೊಂಡು ಹೋದ, ಯಥಾ ಪ್ರಕಾರ ಪತ್ರಿಕೆ ಟಿವಿಯಲ್ಲಿ ಶ್ರೀ ಸ್ವರಾನಂದರು ನಿಗೂಢವಾಗಿ ಆನೆಯ ತುಳಿತದಿಂದ ನಜ್ಜುಗುಜ್ಜಾಗಿ ಹೋದ ಸಮಾಚಾರ ಮರುದಿನ ವಿಶೇಷ ಸುದ್ದಿಯಾಗಿತ್ತು. ನಡೆದ ಘಟನೆಗೂ ತನಗೂ ಯಾವುದೇ ಸಂಬಂಧ ಇಲ್ಲವೆಂಬಂತೆ ಸೀನು ತನ್ನ ಫ್ಯಾಕ್ಟರಿಯ ಸೆಕ್ಯೂರಿಟಿ ಕೆಲಸ ಮಾಮೂಲಿನಂತೆ ನಿರ್ವಹಿಸುತ್ತಲಿದ್ದ. ಪ್ರದ್ಯುಮ್ನಗೆ ಆ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸ ದೊರಕಿತ್ತು.

# ಹಳೇ ಪದ ಹೊಸ ಅರ್ಥ

- ಬೇಲೂರು ರಾಮಮೂರ್ತಿ

| ಹೀಗೆ ಇರುವುದನ್ನು | ಹೀಗೆ ಓದಿ | ಹೀಗೆ ಅರ್ಥ ಮಾಡ್ಕೊಬಹುದು |
|---|---|---|
| ವೈಫಲ್ಯ | wifeಪಲ್ಯ | ಹೆಂಡತಿ ಮಾಡಿದ ಪಲ್ಯ |
| ವೈಪರೀತ್ಯ | wifeಪರೀತ್ಯ | ಹೆಂಡತಿ ಹೇಳಿದ ರೀತಿ |
| ನೋವುಂಡವರು | noಉಂಡವರು | ಇಲ್ಲ ಅನಿಸಿಕೊಂಡವರು |
| ಶಿಕ್ಷೆ | sheಕ್ಷೆ | ಹೆಂಡತಿ ಕೊಟ್ಟ ಶಿಕ್ಷೆ |
| ಶಿಕ್ಷಣ | sheಕ್ಷಣ | ಹೆಂಡತಿಯೊಂದಿಗಿನ ಒಂದು ಕ್ಷಣ |
| ವಿಶ್ವಾಸ | weಶ್ವಾಸ | ನಾವು ಉಸಿರಾಡುವ ಕ್ರಿಯೆ |
| ಹಿಮ್ಮೆಟ್ಟು | heಮ್ಮೆಟ್ಟು | ಅವನ (ಮೆಟ್ಟು)ಪಾದರಕ್ಷೆ |
| ಹಿನ್ನುಡಿ | heನ್ನುಡಿ | ಹಿಂದೆ ಮಾತಾಡಿಕೊಳ್ಳುವವನು |
| ಶೈಶವ | shyಶವ | ನಾಚಿಕೊಂಡಿರುವ ಶವ |
| ಶಿಶು | sheಶು | ಹೆಣ್ಣಿನ ಷೂ |
| ವೈದೇಹಿ | whyದೇಹಿ | ಯಾಕೆ ಬೇಡಬೇಕು |
| ಹೌಹಾರಿದ | howಹಾರಿದ | ಹೇಗೆ ಹಾರಿದ |
| ಪಂಚತಂತ್ರ | punchತಂತ್ರ | ಹೊಡೆಯುವ ಕಲೆಗಾರಿಕೆ |

## ನಗುವಿನಾರಂಭ

ಅವರು ನಗುತ್ತಿದ್ದ ಮದುವೆಯಾಗುವವರೆಗೂ
ಅವಳು ನಗಲಾರಂಭಿಸಿದಳು ಮದುವೆಯ ನಂತರ
ಅವನ ಸಂಕಟ ಬೋನಿಗೆ ಸಿಕ್ಕುಬಿದ್ದೆ ಅಂತ
ಅವಳ ಆನಂದ ಬೋನಿಗೊಂದು ಬಿತ್ತು ಮಿಕ ಅಂತ

# ಬಲಿ ಚಕ್ರವರ್ತಿಯ ಅಜ್ಜ

**- ಎಚ್. ಶಾಂತರಾಜ ಐತಾಳ್**

**ಮೈ**ಸೂರಿನ ಹರಿ ಚಿಕ್ಕಪ್ಪನ ಇಬ್ಬರು ಮಗಳಂದಿರು ಚಿಕ್ಕಂದಿನಿಂದಲೂ ಬಿಂದಾಸ್ ಆಗಿ ಬೆಳೆದವರು, ಈಗ ತಲಾ ಎರಡೆರಡು ಮಕ್ಕಳ ಅಮ್ಮಂದಿರಾಗಿದ್ದಾರೆ. ಹುಡುಗು ಬುದ್ಧಿ ಮಾತ್ರ ಹೋಗಿಲ್ಲ. ದೊಡ್ಡವಳು ವನಜಾ ಬಿ.ಎ., ಬಿ.ಎಡ್. ಮಾಡಿ ಮುಚ್ಚಲು ಸಿದ್ಧವಾದ ಕನ್ನಡ ಹೈಸ್ಕೂಲ್‌ನ ಹೆಡ್ ಮಿಸ್ಟ್ರೆಸ್. ಚಿಕ್ಕವಳು ತನುಜ ಕನ್ನಡ ಎಂ.ಎ. ಯಾವುದೋ ತರ್ಲೆ ಸರ್ಕಾರಿ ಕಚೇರಿಯಲ್ಲಿ ಅಧಿಕಾರಿ. ಮಕ್ಕಳನ್ನು ಸಮ್ಮರ್ ಕ್ಯಾಂಪ್‌ಗೆ ಕಳಿಸಿ, ಗಂಡಂದಿರಿಗೆ ಮೂರುದಿನಕ್ಕಾಗುವಷ್ಟು ಪದಾರ್ಥಗಳನ್ನು ಮಾಡಿಟ್ಟು ನಮ್ಮ ಮನೆಯ ಮಾವಿನ ಹಣ್ಣು, ಗೇರು ಹಣ್ಣುಗಳ ತಪಾಸಣೆಗಾಗಿ ಬಂದಿದ್ದರು ಇಬ್ಬರೂ.

ಬೆಳಗ್ಗಿನ ಉಪಾಹಾರ, ಅನಂತರದ ಫಲಾಹಾರ ಎಲ್ಲ ಆದ ಮೇಲೆ ಈ ಮಾತಿನ ಮಲ್ಲಿಯರು ಕಂಬಿ ಇಲ್ಲದೆ ರೈಲು ಬಿಟ್ಟದ್ದೂ ಆಯಿತು. ಪ್ರೊಜೆಕ್ಟರ್ ಇಲ್ಲದೆ ರೀಲು ಬಿಟ್ಟದ್ದೂ ಆಯಿತು. ಆ ಮೇಲೆ ಪಡಸಾಲೆಯ ಮಂಚದ ಮೇಲೆ ಕುಳಿತುಕೊಂಡು ಬಾಳೆಕಾಯಿ ಚಿಪ್ಸ್‌ನ ಡಬ್ಬಿಯ ಸಮ್ಮುಖದಲ್ಲಿ ಯಾವ್ಯಾವುದೋ ಮ್ಯಾಗಜಿನ್‌ಗಳ ಪದಬಂಧ, ಶಬ್ದಜೋಡಣೆ, ಸುಡೊಕು. ಇವುಗಳಲ್ಲಿ ತಲ್ಲೀನರಾಗುತ್ತಿದ್ದರು. ಸೂಕ್ತ ಪದಗಳು ಸಿಗದಾಗ ತಲ್ಲಣ ಗೊಳ್ಳುತ್ತಿದ್ದರು. ಯಾವುದೋ ಹಾಳು ಮೂಳು ಪುಸ್ತಕಗಳನ್ನು ಓದುತ್ತಾ ತೂಕಡಿಸುವ ಹಂತಕ್ಕೆ ತಲುಪುತ್ತಿದ್ದ ನನಗಂತೂ ಇವರ ಮಾತುಕತೆ ಅಲಾರಂ ಗಡಿಯಾರದಂತೆ ಚುರುಕು ಮುಟ್ಟಿಸುತ್ತಿತ್ತು. ಎಡಗೈಯಲ್ಲಿ ಬಾಳೆಕಾಯಿ ಚಿಪ್ಸ್, ಬಲಗೈಯಲ್ಲಿದ್ದ ಪೆನ್ನನ್ನು ಬಾಯಿಯ ಬಳಿಯೇ ಹಿಡಿದ ವನಜ ಪೀಠಿಕೆ ಹಾಕಿದಳು.

''ಇಲ್ನೋಡೇ ತನು – ಇಲ್ಲೊಂದು ಶಬ್ದ – ಬಲಿ ಚಕ್ರವರ್ತಿಯ ಅಜ್ಜ ಅಂತ ಕ್ಲೂ ಇದೆ. ಯಾರೇ ಅವನ ಅಜ್ಜ?''

''ಬಲಿ ಚಕ್ರವರ್ತಿಯ ಅಜ್ಜನಾ? ವಾಲ್ಮೀಕಿ ಇರಬೇಕು'' – ಕನ್ನಡ ಎಂ.ಎ. ತನುಜ ಉತ್ತರಿಸಿದಳು.

''ಯಾರದು ನಿನ್ನ ವಾಲ್ಮೀಕಿ?''

''ಅದೇ – ಬಲಿಚಕ್ರವರ್ತಿಯ ಅಜ್ಜ!''

ನನಗೆ ನಗು ಬರ್ತಾ ಇದ್ದರೂ ತಡಕೊಂಡು, ಕು–ಕು–ಕು ಅಂತ ಸಣ್ಣಕ್ಕೆ ಕೆಮ್ಮಿದೆ. ಯಾವ ಶಬ್ದವನ್ನು ಬರೆದರೋ ಕೇಳುವ ಧೈರ್ಯ ಮಾಡಲಿಲ್ಲ.

''ಇದರಲ್ಲಿ ಮೇಲಿಂದ ಕೆಳಕ್ಕೆ ನೋಡೇ. ಲಲಿತ ಕಲೆಗಳನ್ನು ಪ್ರದರ್ಶಿಸುವ ಕೇಂದ್ರ – ಅಂತೆ – ನಾಲ್ಕಕ್ಷರದ ಪದ ಬೇಕಾಗಿದೆ. ತಲೆ ಓಡಿಸು ನೋಡುವಾ''

''ಲಲಿತ ಕಲೆಗಳನ್ನು ಪ್ರದರ್ಶಿಸುವ ಸ್ಥಳ – ಮೃಗಾಲಯ ಅಂತ ಹಾಕು. ಆ ಮೇಲೆ ಎಡದಿಂದ ಬಲಕ್ಕೆ ತುಂಬಿಸುವಾಗ ಟ್ಯಾಲಿ ಮಾಡಬಹುದು.''

''ಸುಮ್ನಿರೆ – ಮೃಗಾಲಯ ನಿಮ್ಮ ಆಫೀಸು – ಕೋತಿ ಮುಖದ ನಿಮ್ಮ ಬಾಸ್‌ನಿಂದ ಹಿಡಿದು – ಜಿರಾಫೆ ಕುತ್ತಿಗೆಯ ನಿನ್ನ ಫ್ರೆಂಡ್ ಮಾಲಾ ದೀಕ್ಷಿತ್ – ಹಂದಿ ಮೋರೆಯ ಅಟೆಂಡರ್ ಸಿದ್ದ – ಎಲ್ರೂ ಮೃಗಗಳೇ – ಇಲ್ಲಿ ಯಾವ ಶಬ್ದ ಗೊತ್ತಾ? ಕಲಾಶಾಲೆ!''

ಸ್ವಲ್ಪ ಹೊತ್ತು ಮೌನ. ಕುರು ಕುರು ಶಬ್ದ ಮಾತ್ರ. ಮತ್ತೆ ಅತ್ತಿಗೆಗೆ ಕರೆ ಹೋಯ್ತು – ''ಅತ್ತಿಗೇ ಬೈಟು ಕಾಫಿ ಕೊಡ್ತೀರಾ – ನಿಮ್ಮ ಕಾಫಿಯಂತೂ ಸೂಪರ್ – ಗಿರೀಶಣ್ಣರಿಗೂ ಮಾಡಿ. ಟೂ ಬೈತ್ರೀನೇ ಇರ್ಲಿ ಪ್ಲೀಸ್ –ಹೋಗೇ ತಾರೇ'' – ಎನ್ನುತ್ತಾ ಮೈಸೂರಿನ ಬೈಟೂ ಬುದ್ಧಿಯ ಪ್ರದರ್ಶನವೂ ಆಯ್ತು.

ಕಾಫಿ ವಿರಾಮದ ನಂತರ ಮತ್ತೆ ಶುರುವಾಯ್ತು ಶಬ್ದಗಳಿಗಾಗಿ ಹುಡುಕಾಟ – ಅರ್ಥಕ್ಕಾಗಿ ಪರದಾಟ. ತನುಜಾ ಕೈಲಿ ಬೇರೆ ದಿನಪತ್ರಿಕೆ ಇತ್ತು. ಈಗ ಅವಳಿಂದ ಪ್ರಶ್ನೆ ಬಂತು.

''ಇಲ್ನೋಡಿಲ್ಲಿ, ಸಿನಿಮಾಕ್ಕೆ ದುಡ್ಡು ಹಾಕಿ ಲಾಭದ ನಿರೀಕ್ಷೆಯಲ್ಲಿರುವವರು – ಕಡೇ ಎರಡಕ್ಷರ 'ಕರು' – ಅಂತೆ – ಯಾರು ಹೇಳೇ ಅಕ್ಕಾ?''

''ನಿರ್ಗತಿಕರು – ಸರೀನಾ?''

''ನಿನ್ನ ತಲೆ – ಕನ್ನಡ ಬೆಡ್ – ಶಾಲೆಯ ಹೆಡ್ – ಎಂದೆಲ್ಲ ಕೊಚ್ಚಿಕೊಳ್ತಿಯಲ್ಲಾ? ನಿರ್ಗತಿಕರು ಅಲ್ಲ – ನಿರ್ಮಾಪಕರು – ತಲೆ ಎಲ್ಲಿದೆ ನಿಂದು?''

''ಸರಿ ಮಹರಾಯ್ತಿ. ಇದೇನೆಂದು ನೀನು ಹೇಳು – ನೀನು ಕನ್ನಡ ಎಮ್ಮೆ – ಅಲ್ವಾ? ಕಾಡಿನ ಮಧ್ಯೆ ತಳವೂರಿದ ದೇವರು – ಐದಕ್ಷರ – ನಾಲ್ಕನೇ ಅಕ್ಷರ 'ಕ' – ಹೇಳು ನೋಡುವಾ?''

''ಕಾನನ ಕನ್ಯೆ – ಎಲ್ಲ ಕರೆಕ್ಟಾಗಿ ಸೂಟ್ ಆಗುತ್ತೆ – ಅಲ್ವಾ?''

''ತಪ್ಪು – ಬನಶಂಕರಿ''

''ಈಗ ಇಲ್ಲೊಂದು ಮೂರಕ್ಷರದ ಪದ – ಕಾಡಲ್ಲಿ, ನಾಡಲ್ಲಿ – ಜೀವಿಸಬಲ್ಲ ಪ್ರಾಣಿ – ಹೊಸಬರಿಗೆ ಬೌ – ಬೌ ಮನೆಯವರಿಗೆ ಲೌ – ಲೌ – ಮಧ್ಯದಕ್ಷರ – ನ – ಯಾವುದಿದು ತನೂ?''

''ಮೂರಕ್ಷರದ ಪ್ರಾಣಿ ವಿದ್ ಮಧ್ಯದಕ್ಷರ – ನ – ಕಾಡಲ್ಲಿ – ವನದಲ್ಲಿ – ಅದು ನೀನೆ ವನಜ – ಅಲ್ವೇನೇ?''

ಈಗ ತನು ಬೆನ್ನಿಗೊಂದು ಬಿತ್ತು ಏಟು. ಒಳ್ಳೆದಾಯ್ತು – ಅಂತ ಅದ್ಕೊಂಡೆ ನಾನು. ವನಜ ಕೋಪ ಪ್ರದರ್ಶಿಸುತ್ತಾ ಹೇಳಿದ್ಲು.

''ದೊಡ್ಡಪ್ಪನ ವಾಕಿಂಗ್ ಸ್ಟಿಕ್ ತಂದು ಬಾರಿಸ್ತೀನಿ ನೋಡು ಬೆನ್ನಿಗೆ – ಮೂರಕ್ಷರದ ಪ್ರಾಣಿ ಶುನಕ – ನಾನು ಬೌ ಬೌ ಅಂತೀನಾ? ನಾನು ಶುನಕ ಆದ್ರೆ ನೀನು ಗಾರ್ದಭ – ಕತ್ತೆ – ಅದೆಲ್ಲ ಬೇಡ – ನೀನೂ ಶುನಕವೇ – ಸೋ ಸಿಂಪಲ್.''

''ನೋಡು – ಇಂಗ್ಲೀಷ್ ಬೇಡ – ಬೆಡ್ಡಮ್ಮಾ, ನಾನೊಂದೀಗ ಕೇಳ್ತೇನೆ. ಹದಿನೈದರಲ್ಲಿ ಎಡದಿಂದ ಬಲಕ್ಕೆ ಇಲ್ನೋಡು – ಐದಕ್ಷರದ ಪದ – ತನ್ನ ಹಕ್ಕುಗಳಿಗಾಗಿ ಹೋರಾಡುವವ – ಯಾರು ಹೇಳು?''

''ಬು–ದ್ಧಿ–ಕೆ–ಟ್ಟ–ವ–ಅಲ್ವಾ?''

''ಹೂಂ – ನೀನು ಹೇಳಿದ್ದೂ ಸರೀನೆ. ಆದರೆ ನಿಜವಾದ ಶಬ್ದ ಬಳಕೆದಾರ. ನಿನ್ನ ಮಾವ ಯಾವುದೋ ದೇವಸ್ಥಾನದಲ್ಲಿ ತಂತ್ರ ಹಾಕ್ತಾರೆ ನೋಡು – ಅದಕ್ಕೇ ಇರಬೇಕು – ನಿನಗೂ ಕುತಂತ್ರ ಬುದ್ಧಿ!''

''ಸಚಿವರಾದವರು ಗೌರವಯುತವಾಗಿ ನಡೆದುಕೊಳ್ಳಬೇಕಾದ ಸ್ಥಳ – ಯಾವುದಿದು?''

''ಈಸಿ – ಪರಪ್ಪನ ಅಗ್ರಹಾರ!''

''ದುರ್ದುಂಡಿಗೆ ಯಾವಾಗ್ಲೂ ದುರಾಲೋಚನೆ ಅಂತೆ. ಐದೇ ಅಕ್ಷರದ ಶಬ್ದ ಅದು – ವಿಧಾನಸೌಧ – ಜರಾ ಸೋಚೋ''

ಅಕ್ಕ ತಂಗಿಯರ ಪೈಪೋಟಿ, ಶಬ್ದಗಳ ಜಟಾಪಟಿ ಇನ್ನೂ ನಡೆದಿತ್ತು. ನನಗಂತೂ ಪುಕ್ಕಟೆ ಮನರಂಜನೆ. ಆದರೂ ಪರಿಸ್ಥಿತಿ ಕೈಮೀರಿ ಹೋದೀತು ಎಂಬ ಸಣ್ಣ ದಿಗಿಲೂ ಇತ್ತು.

''ಬಹುಮಾನ ವಿತರಣೆ – ಗೆ ಇನ್ನೊಂದು ಜೋಡಿ ಶಬ್ದ ಬೇಕಾಗಿದೆ ಕಣೆ ಇಲ್ಲಿ – 'ಪ್ರ'ದಿಂದ ಆರಂಭವಾಗಬೇಕು – ಏನಾದರೂ ಸಲಹೆ ನೀಡೇ''

''ಪ್ರೈಜ್ ಡಿಸ್ಟ್ರಿಬ್ಯೂಶನ್''

''ಕನ್ನಡ ಎಮ್ಮೆಯ ಬಾಯಲ್ಲಿ ಮ್ಲೇಚ್ಛರ ನುಡಿಗಳು! ಅಕಟಕಟಾ! ವಿಧಿಯೇ!''

''ಹಾಗಾದರೆ ಪ್ರಸವ ವೇದನೆ – 'ಪ್ರ' – ದಿಂದ ಆರಂಭ!''

''ಎರಡು ಸಲ ಅದನ್ನು ಅನುಭವಿಸಿದ್ದು ಸಾಕಾಗಲಿಲ್ವಾ ಮಹಾತಾಯಿ – ಇನ್ನೂ ಬೇಕಾಗಿದಾ ಪ್ರಸವ ವೇದನೆ ನಿನಗೆ!''

''ಅಯ್ಯೋ – ಸಾಕಪ್ಪಾ ಸಾಕು. ನಿನ್ನ – ಪ್ರ – ಶಬ್ದಕ್ಕೊಂದು ಹಿಂಟ್ ಕೊಟ್ಟೆ ಅಷ್ಟೆ''

''ನನ್ನ ತಲೆ ಚಚ್ಕೋಬೇಕು – ಆ ಶಬ್ದ ಯಾವುದು ಗೊತ್ತಾ? ಪ್ರಶಸ್ತಿ ಪ್ರದಾನ! ಪ್ರಧಾನ ಅಲ್ಲ ಮತ್ತೆ!''

''ಬಿಡೇ ಸಾಕು – ಮಹಾ ಬುದ್ಧಿವಂತೆ''

ಸ್ವಲ್ಪ ಹೊತ್ತು ನೀರವ. ಅಕ್ಷರಗಳನ್ನು ಕೊರೆಯುವುದರಲ್ಲಿ ಇಬ್ಬರೂ ಮಗ್ನರಾಗಿದ್ದಂತೆ ತೋರಿತು. ಮತ್ತೆ ಲೋಕಾಭಿರಾಮದ ಮಾತು ಶುರು ಮಾಡಿದಳು ಅಕ್ಕ. ವನಜ.

''ಈ ಪದಬಂಧ, ಶಬ್ದ ಶಿಲ್ಪ – ಇವುಗಳನ್ನು ಬಿಡಿಸ್ತಾ – ಬಿಡಿಸ್ತಾ ಹೊಸ ಹೊಸ ಶಬ್ದಗಳನ್ನು ನಮ್ಮ ಭಂಡಾರಕ್ಕೆ ಸೇರಿಸ್ಕೋಬಹುದು – ಅಲ್ವೇನೇ''

''ಹೌದಮ್ಮಾ, ಹೌದು. ಅಡುಗೆ ಸಾಮಗ್ರಿ ಅಂತ ಸುಲಭವಾಗಿ ಹೇಳೋದಕ್ಕೆ - ಲಾವಾಜಮೆ - ಎಂಬ ಶಬ್ದ ಕೊಡ್ತಾರೆ.''

''ಕರೆಕ್ಟ್! ಬೆಕ್ಕಿನ ಕಣ್ಣು ಹೊಂದಿರುವ ರಾಜ್‌ಕಪೂರ್ ಸಂತಾನದವರನ್ನು; ಐಶ್ವರ್ಯ ರೈಯನ್ನು - ಗಜಾನನ ವಾಹನ ರಿಪು ನಯನ - ಅಂತ ವಿವರಿಸ್ತಾರೆ - ಈ ಶಬ್ದ ಜೋಡಣೆ ಅಂಕಣದವರು''

''ಏನೇ ಅದು ರೀಪು - ಪಕ್ಕಾಸು?''

''ರೀಪು ಅಲ್ವೆ - ರಿಪು - ಅಂದ್ರೆ ವೈರಿ. ಈಗ ಹೇಳು ಗಜಾನನ ಅಂದ್ರೆ ಗಣಪ - ಅವನ ವಾಹನ ಯಾವುದೂ?''

''ಆನೆ''

''ನಿನ್ನ ತಲೆ - ಆನೆಯಂತೆ, ಆನೆ! ಒಂದು ಸೊಂಡಿಲನ್ನು ಅಲ್ಲಾಡಿಸುತ್ತಾ ಇರೋ ಗಣಪ ಇನ್ನೊಂದು ಸೊಂಡಿಲಿರುವ ಆನೆ ಮೇಲೆ ಸವಾರಿ ಹೋಗೋ ಚಿತ್ರ ಇರೋ ಕ್ಯಾಲೆಂಡರ್ ಎಲ್ಯಾದರೂ ನೋಡಿದ್ದೀ ಏನೇ? ಇಲಿ ಮೇಲೆ ಸವಾರಿ ಮಾಡೋದು ಗಣಪತಿ - ತಿಳ್ಕೊ. ಹೋಗ್ಲಿ ಗಜಾನನ ವಾಹನ ಇಲಿ ಆಯ್ತು. ಅದರ ರಿಪು - ವೈರಿ ಯಾರು?''

''ಇಲಿ ಪಾಷಾಣ - ರ್‍ಯಾಟ್ ಪಾಯ್ಸನ್ - ಮೈ ಡಿಯರ್ ಅಕ್ಕಾ''

''ಥೂ ನಿನ್ನ! ಇಲಿಯ ವೈರಿ ಬೆಕ್ಕು - ಈ ರಿಪುವಿನ ನಯನ ಅಂದ್ರೆ ಕಣ್ಣು ಹೊಂದಿದವ - ಅಥವಾ ಹೊಂದಿದವಳು ಬೆಕ್ಕಿನ ಕಣ್ಣು - ಪುಚ್ಚೆ ಕಣ್ಣು - ಎಂದರ್ಥ ತಿಳೀತಾ'' ಮತ್ತೆ ಮೌನ.

ಈಗ ಮಾತ್ರ ನನಗೆ ಸ್ವಲ್ಪ ಇರಿಸು ಮುರಿಸು ಆಯಿತು. ಯಾಕೆಂದ್ರೆ ನನ್ನ ಅರ್ಧಾಂಗಿ ಶಾರಿಯ ಕಣ್ಣು ಅದೇ - ಬೆಕ್ಕಿನ ಕಣ್ಣು!

ಅಂದ್ರೆ ಇನ್ನು ಮುಂದೆ ಅವಳಿಗರ್ಥವಾಗದ ರೀತಿಯಲ್ಲಿ ಅವಳನ್ನೂ ಯಾರು ಬೇಕಾದರೂ ಕರೆಯಬಹುದು. ಗಜಾನನ ವಾಹನ ರಿಪು ನಯನೇ - ಅಂತ!

ಈ ವಿಷಯವನ್ನು ಶಾರಿ ಜತೆ ಶೇರ್ ಮಾಡೋಣವೆಂದುಕೊಳ್ಳುತ್ತಾ ನನ್ನ ನಿರ್ಲಿಪ್ತಾಸನದಿಂದ ಕದಲಿ, ಅಡುಗೆ ಮನೆಯತ್ತ ಹೆಜ್ಜೆ ಹಾಕಿದೆ.

---

**ಕಾರಣ**

'ನೀನೇಕೆ ಅಳುತ್ತಿರುವಿ?'

'ಏಕೆಂದರೆ ನಾನೊಬ್ಬ ಮೂರ್ಖ.'

'ಅಳಲು ಅದು ಕಾರಣವಾಗಬಾರದು. ದುಃಖವಾದಾಗ ಅಳುತ್ತಾರೆ. ಉದಾಹರಣೆಗೆ, ನಾನು ಅಳುತ್ತೇನೆ ಏಕೆಂದರೆ ಇತರರು ಮೂರ್ಖರು. ಅದು ನನಗೆ ದುಃಖ ತರಿಸುತ್ತದೆ.'

# ಎಜುಕೇಷನ್ ಎಡವಟ್ಟು

**- ಇ.ಆರ್. ರಾಮಚಂದ್ರನ್**

**ಜೂ**ನ್ ತಿಂಗಳು ಬಂತೂಂದ್ರೆ ತಂದೆ ತಾಯಿಯರಿಗೆ ಏನೇನೋ ಶಾಕ್ ಹೊಡೆದು ಮೈಯೆಲ್ಲಾ ಜುಂ ಅನ್ನೋ ಟೈಮ್

ಜೂನ್ ತಿಂಗಳು ಅಂದ್ರೆ ಸ್ಕೂಲು ಶುರು. ಅದಕ್ಕೆ ಮುಂಚೆ ಅವರಿವರ ಕೈಕಾಲು ಹಿಡಿದು, ಹಲ್ಲು ಬೀರಿ ಮಾನ ಬಿಟ್ಟು ನಿಮ್ಮ ಸ್ಕೂಲ್ನಲ್ಲಿ ಸೀಟು ಕೊಡೀಂತ ಅಂಗಲಾಚುವ ಸಮಯ.

ಎಲ್‌ಕೆಜಿ ಸ್ಕೂಲಿಗೆ ಸೇರಿಸೋಣವೆಂದು ನಮ್ಮ ಪುಟ್ಟನ್ನ ಕರ್ಕೊಂಡು ಹೋದ್ರೆ ಹೆಡ್ಮೇಡಮ್ ನನ್ನ ಮತ್ತು ಹೆಂಡ್ತೀನ ಇಂಟರ್‌ವ್ಯೂಗೆ ಕರೆದ್ರು. 'ಚೆನ್ನಾಗಿ ಪ್ರಿಪೇರ್ ಮಾಡ್ಕೊಂಡ್ ಬನ್ನಿ. ನಿಮ್ಮ ಹುಡುಗನ ಫ್ಯೂಚರ್ ನಿಮ್ಮ ಪರ್‌ಫಾರ್ಮೆನ್ಸ್ ಮೇಲೆ ಹೋಗುತ್ತೆ' ಅಂದಾಗ ಇಬ್ಬರಿಗೂ ಪಕ್ಕದಲ್ಲೇ ಸಿಡಿಲು ಹೊಡೆದಂಗಾಯಿತು. ನಮ್ಮ ನಮ್ಮ ಪರೀಕ್ಷೆ, ಕೆಲಸಗಳಿಗೇ ರಾತ್ರಿಯೆಲ್ಲಾ ಓದಿರಲಿಲ್ಲ. ಹೇಗೋ ಅದೂ ಇದೂ ಉರು ಹೊಡ್ದು ಕಂಬೈಂಡ್ ಸ್ಟಡಿ ಮಾಡಿದ್ವಿ.

ಹೆಡ್ಮೇಡಮ್ನ ರೂಮಿಗೆ ಹೋದಾಗ ಕಣ್ಣಿನಿಂದಲೇ ಕುರ್ಚಿಯ ಕಡೆ ಸನ್ನೆ ಮಾಡಿದರು. ಇನ್ನೂ ನರ್ವಸ್ ಆಯ್ತು; ಎದೆ ಡವಡವ ಹೊಡಕೊಳ್ತಿತ್ತು. ಬೆವರೂ ಸುರೀತಿತ್ತು.

ಅವರು ಕೇಳಿದ ಪ್ರಶ್ನೆ ಡೇಲ್ ಸ್ಟೈನ್ನ ಬೌನ್ಸರ್ ತರಹ ತಲೇ ಮೇಲೆ ಹಾರಿ ಹೋಯಿತು.

- ಒಸಾಮ ಬಿನ್ ಲಾಡೆನ್‌ನನ್ನು ಯಾವ ತಿಂಗಳಲ್ಲಿ ಅಮೇರಿಕನ್ನರು ಕೊಂದರು?
- ಒಬಾಮನ ಕೆಜಿ ಸ್ಕೂಲ್‌ನ ಹೆಸರು ಏನು?
- ಕಸಬ್ ಮಿಯಾ ಭಾರತದಲ್ಲಿ ಎಷ್ಟು ವರ್ಷದಿಂದ ಇದ್ದಾನೆ?
- ಐಸ್ಕ್ರೀಮ್ನಲ್ಲಿ ಎಷ್ಟು % ಕೊಬ್ಬಿದೆ?
- 'ಊಲಾಲ, ಊಲಾಲ' ಹಾಡಿಗೆ ಯಾರ್‍ಯಾರು ಡ್ಯಾನ್ಸ್ ಮಾಡಿದ್ರು?

'ಇದೆಲ್ಲಾ ಬೇಕಾ' ಎಂದು ಇವಳು ಕೇಳಿದ್ದಕ್ಕೆ ಹೆಡ್ ಮೇಡಮ್ ರೊಚ್ಚಿಗೊಂಡು, 'ನಿಮ್ಮ ವಯಸ್ಸಿನವರಿಗೆ ಬೇಡದಿರಬಹುದು, ಮಕ್ಕಳು ಇದೆಲ್ಲಾ ಖಂಡಿತವಾಗಿ ಕೇಜಿಯಲ್ಲೇ ಕಲೀಬೇಕು. ಅದಿಲ್ಲಿದ್ರೆ ಮುಂದೆ ಅವರೂ ನಿಮ್ಮ ಹಾಗೆ ಆಗ್ತಾರೆ' ಅಂತ ಕೊಂಕು ನುಡಿದು ಕುಹಕ ನಗೆ ನಕ್ಕರು.

'ಪರ್ವಾಗಿಲ್ಲ.. ನಾವು ತಿದ್ಕೋತೀವಿ. ಪುಟ್ಟನಿಗೆ ಅಡ್ಮಿಷನ್ ಕೊಡಿ' ಅಂತ ಅಂಗಲಾಚಿದೆವು.

'ನೀವಿಬ್ಬರೂ ನೋಡಿದ್ರೆ ಬ್ರೈಟ್ ಪೇರೆಂಟ್ಸ್ ತರಾ ಕಾಣಿಸ್ತೀರಿ. ಸರಿ ಕೊಡ್ತೀನಿ' ಅಂತು ಪುಣ್ಯಾತ್ಗಿತ್ತಿ.

ಫಾರ್ಮು ಫಿಲ್ ಮಾಡಿ ಫೀಸ್ ಕಟ್ಟಿ ಅಂದ್ರು. ನಮ್ಮಿಬ್ಬರಿಗೂ ಸ್ವರ್ಗ ಬರೀ ಮೂರೇ ಗೇಣು ಅನ್ನಿಸ್ತು; ಸ್ವಲ್ಪ ಹೊತ್ತಷ್ಟೆ ಅಲ್ಲಿಂದ ಯಾರೋ ಕುತ್ತಿಗೆ ಹಿಡಿದು ತಳ್ಳಿದ ಹಾಗೆ ಆಯ್ತು.

**ಪುಟ್ಟನ ಅಡ್ಮಿಷನ್ ಫೀಸ್: ಎಲ್ಕೆಜಿ**

| | |
|---|---|
| ವರ್ಷದ ಫೀಸ್........................ | 25,000 |
| ಬಿಲ್ಡಿಂಗ್ ಫೀಸ್....................... | 30,000 |
| ಫೌಂಡರ್ಸ್ ಡೇ........................ | 50,000 |
| ಪುಸ್ತಕ.................................. | 20,000 |
| **ಇತರೆ:** | |
| ಷೂಸ್ (ನಾಲ್ಕು ಜೊತೆ)............ | 5000 |
| ಪ್ರಾಜೆಕ್ಟ್ ವರ್ಕ್...................... | 2000 |
| ಎಯ್ಡ್ಸ್ ರನ್........................ | 4000 |
| ಗ್ರೀನ್ ರನ್.......................... | 4000 |
| ಕಂಪ್ಯೂಟರ್ ಕ್ಲಾಸ್.................. | 10,000 |
| ಎಲ್ಲಾ ಸೇರಿ........................... | 1,50,000 ರೂಪಾಯಿ. |

ಪುಟ್ಟನ ಕೈಲಿ ಕೀಬೋರ್ಡ ಮತ್ತು ಮೌಸ್ ಹಿಡಿಯುವುದಕ್ಕೆ ಆಗುತ್ತಾ ಅಂತ ನಾನು ಅನುಮಾನಿಸಿದಾಗ, 'ಬಿಲ್ ಗೇಟ್ಸ್ ಸಣ್ಣ ವಯಸಿನಲ್ಲೇ ಕಂಪ್ಯೂಟರ್ ಕಲಿತು ಮೇಧಾವಿ ಆಗಲಿಲ್ಲವೇ' ಎಂದು ಮೂದಲಿಸಿದರು ಹೆಡ್ ಮೇಡಮ್. 'ಬಿಲ್ ಗೇಟ್ಸ್ ಕಾಲೇಜ್ ಡ್ರಾಪೌಟ್' ಅಂತ ಹೇಳಲು ಹೊರಟವನು ನನ್ನವಳ ಕೆಂಗಣ್ಣು ನೋಡಿ ಸುಮ್ಮನಾದೆ. ಇಲ್ದಿದ್ರೆ ನಮ್ಮ ಪುಟ್ಟ ಎಲ್ಕೆಜಿ ಸೇರುವ ಮೊದಲೇ ಸ್ಕೂಲ್ ಡ್ರಾಪೌಟ್ ಆಗಿರೋವ್ನು.

'ಸ್ಕೂಲ್ ಫೌಂಡರ್ ಯಾರು?' ಅಂತ ಮೆಲ್ಲಗೆ ಕೇಳ್ದೆ ಕ್ಲರ್ಕನ: 'ಹೆಡ್ಮೇಡಮ್ ತಂದೆ ಅಂದ!'

ನಾವಿಬ್ಬರೂ ಓಡ್ಹೋಗಿ ಪಿ.ಎಫ್.ನಿಂದ ಲೋನ್ ತಂದು ಪುಟ್ಟನ್ನ ಸ್ಕೂಲ್ಗೆ ಹಾಕಿದ್ದಾಯಿತು.

**ಪುಟ್ಟನ ಪ್ರಾಜೆಕ್ಟ್ ವರ್ಕ್:** ಹಾಳೆ ಮೇಲೆ ಬಣ್ಣದ ಪೆನ್ಸಿಲ್ನಲ್ಲಿ ಗೀಚೋದು. ಅದನ್ನು ಅವನು ಮನೆಗೆ ಬಂದ ತಕ್ಷಣ ಫ್ರೇಮ್ ಹಾಕಿ ಕೋಟ್ ಹ್ಯಾಂಗರ್ಗೆ ತಗಲು ಹಾಕಿಡಬೇಕು. ಇಲ್ದಿದ್ರೆ ವರ್ಷದ ಕೊನೆಯಲ್ಲಿ ಮಾರ್ಕ್ಸ್ ಸಿಗಲ್ಲ. ಪುಟ್ಟ ಸ್ಕೂಲ್ ಸೇರುವ ಮೊದಲೇ ಡ್ರಾಯಿಂಗ್ನಲ್ಲಿ ಗ್ರ್ಯಾಜುಏಟ್; ಮನೆಗೋಡೆಯೆಲ್ಲಾ ಅವನ ಪ್ರಾಜೆಕ್ಟ್ ಮಹಿಮೇನೆ! ಅವನ್ನ ಈಗಲೇ ಬಿ.ಬಿ.ಎಂ.ಪಿ.ಯಲ್ಲಿ ಇನ್ಫ್ಲುಯನ್ಸ್ ಮಾಡಿಸಿ ಬೆಂಗಳೂರಿನ ಗೋಡೇನ ಪೈಂಟ್ ಮಾಡಿಸಬಹುದು. ಆದ್ರೆ ಅದಕ್ಕೂ ಲಕ್ಷಗಟ್ಟಲೆ ಖರ್ಚು ಮಾಡಬೇಕಾಗುತ್ತೆ.

ಪ್ರಮೋಷನ್ನಾಗಿ ಪುಟ್ಟ ಯುಕೆಜಿಗೆ ಹೋದಾಗ ಅವನ ಫೀಸ್ಗೂ ಪ್ರಮೋಷನ್ ಆಯ್ತು. ಎಲ್ಲವೂ ಇನ್ನೆರೆಡು ಸಾವಿರ ಮೇಲೇರಿತು. ಮತ್ತೆ ಫೌಂಡರ್ಸ್ ಡೇ, ಬರ್ತ್ ಡೇ. ಇದು ಯಾರ್ದೆಂದು ಕೇಳ್ದೆ. ಹೆಡ್ ಮೇಡಂನ ತಾಯಿದು ಅಂದ ಕ್ಲರ್ಕ್! ಹೆಡ್ ಮೇಡಂಗೆ ಫೌಂಡರ್ಸ್ ಮೇಲೆ ಎಂಥಾ ಪ್ರೀತಿ! ಪುಟ್ಟನ ಓದು ಮುಗಿಯುವಷ್ಟರಲ್ಲಿ ನಾವು ಚೊಂಬು ಹಿಡಿಯೋದ್ರಲ್ಲಿ ಅನುಮಾನವೇ ಇಲ್ಲ ಎಂದು ಖಚಿತವಾಯಿತು.

ಇದಾಗಿ ಎರಡು ತಿಂಗಳಿಗೆ ನನ್ನ ದೊಡ್ಡ ಅಣ್ಣನ ಮಗ ವಾಸು ಕಾಲೇಜ್ ಸೇರ್ದ. ನಾನು ಆವತ್ತು ಅಲ್ಲೇ ಇದ್ದೆ.

ವಾಸುವಿನ ಖರ್ಚು ಏನೇನೂ ಇಲ್ಲ ಅಂತ ಅನ್ನಸ್ತು ಪುಟ್ಟನ್ನ ಖರ್ಚು ಕಂಪೇರ್ ಮಾಡಿದ್ರೆ. ವಾಸುವಿಗೆ ಪುಸ್ತಕದ ಖರ್ಚೇ ಇಲ್ಲ. ಒಂದು ನೋಟ್ ಬುಕ್ ಸುರುಳಿಸುತ್ಕೊಂಡ್ ಹೋದ್ರೆ ಮುಗೀತು. ಟೆಸ್ಟ್ ಬುಕ್ಕಿಲ್ಲ; ಫೌಂಡರ್ಸ್ ಡೇ ಕಾಟ ಇಲ್ಲ. ಮಕ್ಕಳ್ನ ಎಲ್‌ಕೇಜಿ, ಯೂಕೇಜಿ ಬದ್ಲು ಸೀದಾ ಕಾಲೇಜ್ಗೇ ಹಾಕ್ಬೇಕು ಅಂತ ಹೇಳ್ದೆ ನಮ್ಮಣ್ಣಂಗೆ.


ಅವ್ನು ತಲೇ ಆಡ್ಸಿ ನನ್ಕೈಗೆ ಒಂದು ಸಣ್ಣ ಕಾಗ್ದ ಕೊಟ್ಟ.

| | |
|---|---|
| ರೇಬಾನ್ ಕೂಲಿಂಗ್ ಗ್ಲಾಸ್.......... | 20,000ಘಂಟಾಯಣ |
| ಅನ್‌ಡ್ರಾಯ್ಡ್ ಮೊಬೈಲ್............. | 15,000 |
| ಹಯಬೂಸ ಮೊಬೈಕ್................ | 2,00,000 |
| ಲೆನೋವೊ ಲ್ಯಾಪ್ ಟಾಪ್........... | 25,000 |
| ಪಾಕೆಟ್ ಮನಿ, ವರ್ಷಕ್ಕೆ ............. | 20,000 |
| **ಇತರೆ:** | |
| ಕಾಲೇಜ್ ಫೀಸ್ ...................... | 20,000 |
| ಒಟ್ಟು.................................... | 3,00,000 ರೂಪಾಯಿ |

ಅದರಲ್ಲಿ ಪುಸ್ತಕದ ಹೆಸರೇ ಇಲ್ಲ!

ನಮ್ಮಣ್ಣನ್ನ ಕೇಳ್ದೆ, 'ಇಷ್ಟು ದುಡ್ಡು ಹೇಗೆ ಮ್ಯಾನೇಜ್ ಮಾಡ್ದೆ?' ಅಂತ.

''ನಮ್ಮ ಅತ್ತೆ, ಮಾವ ಕಾಶೀಗೆ ಹೋಗ್ಬೇಕೂಂತ ಲೈಫ್ ಸೇವಿಂಗ್ಸ್ ಇಟ್ಟಿದ್ರು. ವಾಸೂನ್ನ ಕರಕೊಂಡ್ ಹೋಗಿ ಅವ್ನು ಕೊಟ್ಟಿರೋ ಲಿಸ್ಟನಲ್ಲಿರೋ ಸಾಮಾನ್ನೆಲ್ಲಾ ತೊಗೊಂಡು ಬಂದೀದಾರೆ. ಡಿಸ್ಕವರಿ ಚ್ಯಾನಲ್‌ನಲ್ಲಿ ಮುಂದಿನ ವಾರ ಒಂದು ಘಂಟೆ ಕಾಲ ವಾರಣಾಸಿ ತೋರಿಸ್ತಾರಂತೆ. ಮೊಮ್ಮಗನ್ನ ಮಧ್ಯೆ ಕೂಡಿಸ್ಕೊಂಡು ಅವರಿಬ್ಬರು ಕಾಶಿ ಯಾತ್ರೆ ಮನೇಲೇ ಮಾಡ್ತಾರೆ!''




Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru

SIEMENS
Authorised Hearing Care Centre

Avail **FREE** supply of batteries for a year on purchase of hearing aids for this week.
10am - 1:30pm, 5pm - 8pm
Appointment : 26640571, 9741765454

**ಕಿವಿ - ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**
**ವಾಕ್ - ಶ್ರವಣದೋಷ ತಜ್ಞ, ವಿಸ್ಪರ್ ವಾಕ್ - ಶ್ರವಣ ಕೇಂದ್ರ**

# ಶಕ್ತಿಶಾಲಿ ತೂಕಡಿಕೆ ಅಥವಾ ಪವರ್ ನ್ಯಾಪ್

**- ನಂದಿನಿ ಕಾಪಡಿ**

**ಪ**ವರ್ ನ್ಯಾಪ್ ಎಂದರೆ ಏನು ಅಂತ ಕೇಳಿದರೆ ಚುಟುಕಾಗಿ ಉತ್ತರ ಕೊಡೋದಕ್ಕಾಗುವುದಿಲ್ಲ. ಮಧ್ಯಾಹ್ನ ಗಡದ್ದಾಗಿ ಭೋಜನ ಮಾಡಿ ಆರಾಮವಾಗಿ ಪವಡಿಸಿಬಿಡುವುದು ಈ ಗುಂಪಿನಲ್ಲಿಲ್ಲ. ಅದು ''ಮಧ್ಯಾಹ್ನದ ವಿಶ್ರಾಮ ಅಥವಾ ನಿದ್ದೆ!''

ರಾತ್ರಿಯೆಲ್ಲ ನಿದ್ದೆಯಿಲ್ಲದೆ, ಮಾರನೇ ದಿನ ಆಫೀಸಿನ ಮೇಜಿನಲ್ಲಿಯೋ, ಶಾಲಾ ಕಾಲೇಜಿನ ಬೆಂಚಿನಲ್ಲಿಯೋ ಕುಳಿತು ತೂಕಡಿಸುವುದು ಕೂಡಾ ಪವರ್ ನ್ಯಾಪ್ ಎನಿಸಿಕೊಳ್ಳುವುದಿಲ್ಲ. ಅದಕ್ಕೆ ನಮ್ಮ ಮುಂಬೈನವರು ಕೊಟ್ಟಿರುವ ಹೆಸರು ''ಢುಳುಕಿ''.

ಹಾಗಾದರೆ ಪವರ್ ನ್ಯಾಪ್ ಎಂದರೇನು?

ಮೊದಲನೆಯದಾಗಿ ಪವರ್ ನ್ಯಾಪ್ ಹೊಡೆಯುವ ವ್ಯಕ್ತಿ ತುಂಬಾ ಅಂದರೆ ಅತಿಯುತವಾದ ಕಾರ್ಯಶಾಲಿಯಾಗಿರಬೇಕು. ಕನ್ನಡದಲ್ಲಿ ಹೇಳಬೇಕೆಂದರೆ ''ಸೂಪರ್ ಬಿಜಿ!''

ಎರಡನೆಯದಾಗಿ ಆ ವ್ಯಕ್ತಿಗೆ ಒಂದು ಕಾರ್ಯದಿಂದ ಇನ್ನೊಂದು ಕಾರ್ಯಕ್ಕೆ ಹೋಗಲು ಬಿಡುವೇ ಇರುವುದಿಲ್ಲ. ಆದರೂ ಡೈರಿಯಲ್ಲಿ ಬರೆದಿಟ್ಟುಕೊಂಡ ಅಥವಾ ಪಿ.ಎ. ಸೂಚಿಸಿದ ಪ್ರಕಾರ ಸೆಕೆಂಡು ಸೆಕೆಂಡುಗಳ ಲೆಕ್ಕದಂತೆ ಒಂದು ಕಾರ್ಯದಿಂದ ಇನ್ನೊಂದು ಕಾರ್ಯಕ್ಕೆ ನುಗ್ಗುತ್ತಿರಬೇಕು. ಮೂರನೆಯದಾಗಿ ಬೆಳಗಿನಿಂದ ಒಂದಾದ ಮೇಲೊಂದರಂತೆ ಕೆಲಸ ಮಾಡಿ ಮಧ್ಯಾಂತರದಲ್ಲಿ ಸರಸರನೇ ಒಂದೈದು ಅಥವಾ ಹತ್ತು ನಿಮಿಷಗಳು ಸುಮ್ಮನೇ ಕುಳಿತೋ ಅಥವಾ ಪವಡಿಸಿಯೋ ''ಮಲಗಿದಂತೆ ನಟಿಸಬೇಕು!'' ಈ ನಟನೆಯ ಯಾವುದೇ ಹಂತದಲ್ಲೂ ಕಾರ್ಯದ ಬಗ್ಗೆ ಯೋಚಿಸಬಾರದು. ಉಸಿರಾಟ ನಿಧಾನವಾಗಿ ಗಂಭೀರವಾಗಿ ಸಾಗಬೇಕು. ಬೇಕಾದವರು ಸುಶ್ರಾವ್ಯ ಸಂಗೀತದ ಟೇಪು ಹಾಕಿ ಕೇಳಬಹುದು ಅಥವಾ ''ಯೋಗನಿದ್ರಾ'' ಎಂಬ ಗಂಭೀರ ಯೋಗ ಕಾರ್ಯದಲ್ಲಿ ನಿರತರಾಗಬಹುದು. ಈ ಐದು ಹತ್ತು ನಿಮಿಷಗಳಲ್ಲಿ ಫೋನು, ಮೊಬೈಲು ಅಥವಾ ಬೇರೆ ಯಾವ ರೀತಿಯ ಸದ್ದೂ ಇರಬಾರದು. ಕಡೆಯದಾಗಿ ನಿಧಾನವಾಗಿ ಕೈಕಾಲು ಆಡಿಸಿ ಕೈಗಳನ್ನುಜ್ಜಿ ಕಣ್ಣಿನ ಮೇಲಿಟ್ಟುಕೊಂಡು ನಿಧಾನವಾಗಿ ಕಣ್ತೆರೆದು ಮೇಲೇಳಬೇಕು. ಇದೇ ಪವರ್ ನ್ಯಾಪ್. ಇಂತಹ ಶಕ್ತಿಶಾಲೀ ತೂಕಡಿಸುವಿಕೆಯಿಂದ ಮನಕ್ಕೆ ವಿಶ್ರಾಂತಿ ಸಿಗುತ್ತದೆ. ತನುವಿನಲ್ಲಿ ಹೊಸ ಚೇತನ ಹರಿಯುತ್ತದೆ ಮತ್ತು ಚಟುವಟಿಕೆ ಇನ್ನೂ ಹೆಚ್ಚಾಗುತ್ತದೆ.

ನಾನು ಕೇಂದ್ರ ಸರ್ಕಾರದ ಸೇವೆಯಲ್ಲಿದ್ದವಳು. ಒಂದು ದಿನ ದೆಹಲಿಯಿಂದ ನನ್ನ ಆಫೀಸು ತಯಾರಿಸಿದ್ದ ರಾಜ್ಯ ಸರ್ಕಾರದ ಆಡಿಟ್ ರಿಪೋರ್ಟ್‌ನ ಬಗ್ಗೆ ಕೂಲಂಕುಶ ಚರ್ಚೆ ನಡೆಸಲು ನಮ್ಮ ಶರ್ಮಾ ಸಾಹೇಬರ ಆಗಮನವಾಯಿತು. ಬೆಳಗ್ಗೆ ಒಂಭತ್ತರಿಂದ ಹನ್ನೆರಡರವರೆಗೆ ಚರ್ಚೆ ನಡೆಯುತ್ತಲೇ ಹೋಯಿತು. ಒಂದೊಂದೇ ಕಡತ ಅವರಿಗೆ ತೋರಿಸುತ್ತಾ ನಾನೂ ಸುಸ್ತಾಗಿಬಿಟ್ಟಿದ್ದೆ. ಸರಿ ಅವರಿಗೂ ಬೇಸರವಾಗಿತ್ತೋ ಏನೋ ''ಲೆಟಸ್ ಬ್ರೇಕ್'' ಎಂದವರೇ ಮೇಜಿನಿಂದ ಎದ್ದುಬಿಟ್ಟರು. ನನ್ನ ಸಹೋದ್ಯೋಗಿಗಳೆಲ್ಲಾ ಕೋಣೆಯ ಹೊರಗೆ ಹೋದರು. ಅದು ನನ್ನದೇ ಆಫೀಸಿನ ಕೋಣೆಯಾದ್ದರಿಂದ ನಾನು ಅಲ್ಲೇ ಕುಳಿತೆ. ಸಾಹೇಬರು ಸೀದಾ ಸೋಫಾ ಸೀಟಿನೆಡೆಗೆ ನಡೆದು ಒಂದು ಜಾಗದಲ್ಲಿ ಕುಳಿತು ಕಣ್ಣು ಮುಚ್ಚಿಕೊಂಡರು. ನನಗೆ ಒಂದು ತರಹಾ ಕುತೂಹಲ. ಕಡತ ನೋಡುತ್ತಿರುವಂತೆ ನಟಿಸಿ ಅವರತ್ತಲೇ ಆಗಾಗ ಕಣ್ಣು ಹಾಯಿಸುತ್ತಿದ್ದೆ. ಸರಿಯಾಗಿ ಹತ್ತು ನಿಮಿಷಗಳ ನಂತರ ಸೋಫಾದಿಂದ ಎದ್ದವರೇ ''ನಂದಿನಿ ಬನ್ನಿ ಚರ್ಚೆ ಮುಂದುವರೆಸೋಣ'' ಎಂದರು. ಭಾರೀ ಚೂಟಿಯಾಗಿ ಕೆಲಸವನ್ನೆಲ್ಲಾ ನಡೆಸಿಕೊಟ್ಟರು. ಅಷ್ಟೇ ಕಡಿಮೆ ಸಮಯದಲ್ಲಿ ಈತ ಹೇಗೆ ವಿಶ್ರಮಿಸಿದರು ಎಂದು ಆಶ್ಚರ್ಯವಾಯಿತು.

ಶರ್ಮಾ ಸಾಹೇಬರ ''ಪವರ್ ನಾಪ್'' ಈಗ ಪೂರ್ತಿ ದೇಶದಲ್ಲಿ ಸುದ್ದಿಯಾಗಿಬಿಟ್ಟಿತ್ತು. ನನ್ನಂತೆಯೇ ಬೇರೆ ಬೇರೆ ರಾಜ್ಯಗಳ ಅಕೌಂಟೆಂಟ್ ಜನರಲ್‌ಗಳೂ ಅವರ ''ಪವರ್ ನ್ಯಾಪ್'' ನೋಡಿ ಭಾರೀ ಪ್ರಭಾವಿತರಾಗಿಬಿಟ್ಟರು. ಟೆಲಿಫೋನಿನ ಮುಖೇನ ಅವರ ''ಪವರ್ ನ್ಯಾಪ್'' ಕೌತುಕವನ್ನೇ ಕುರಿತು ಎಲ್ಲರೂ ಮಾತಾಡುತ್ತಿದ್ದರು.

ನನಗಿಂತಾ ತುಂಬಾ ಜೂನಿಯರ್ ಆಗಿದ್ದ ನನ್ನ ಸಹೋದ್ಯೋಗಿ ಜಸವಿಂದರ್ ಸಿಂಗ್ ನಮ್ಮ ಚೆನ್ನೈಗೆ ಇನ್ನೊಬ್ಬ ಅಕೌಂಟೆಂಟ್ ಆಗಿ ಬಂದರು. ಒಂದು ದಿನ ನನಗೆ ದೆಹಲಿಯ ಮುಖ್ಯ ಕಾರ್ಯಾಲಯದಿಂದ ತುರ್ತು ಟೆಲಿಫೋನ್. ನಾವಿಬ್ಬರೂ ಸೇರಿ ರಾಜ್ಯ ಸರ್ಕಾರದೊಂದಿಗೆ ಯಾವುದೋ ಮುಖ್ಯ ವಿಷಯ ಮಾತನಾಡಬೇಕಿತ್ತು. ಟೆಲಿಫೋನಿಗೆ ಕಾಯದೇ ನಾನು ಸೀದಾ ಜಸವಿಂದರ್ ಸಿಂಗ್ ಕಾರ್ಯಾಲಯಕ್ಕೆ ಹೋಗಿ ಅವರ ಆಫೀಸು ರೂಮಿನ ಹೊರಗೆ ನಿಂತೆ. ಒಳಗಿನಿಂದ ಜೋರಾಗಿ ಗೊರಕೆ ಶಬ್ದ ಬರುತ್ತಿತ್ತು. ಆಫೀಸಿನ ಗ್ರೂಪ್ ಡಿ, ''ಸಾಹೇಬರು ಒಳಗೆ ಆರಾಮ ತೆಗೆದುಕೊಳ್ಳುತ್ತಿದ್ದಾರೆ ನೀವು ಬಂದಿರುವಿಕೆಯನ್ನು ಪಿ.ಎ. ಸಾಹೇಬರಿಗೆ ಹೇಳಿ ಬರುತ್ತೇನೆ'' ಎಂದು ಅಲ್ಲಿಂದ ಕಳಚಿಕೊಂಡ. ಮುಂದಿನ ಐದು ನಿಮಿಷಗಳು ನಾನು ಜಸವಿಂದರ್ ಸಿಂಗ್ ಅವರ ಗೊರಕೆಯ ಮೋಡಿಗೆ ಸಿಲುಕಿ ನಾನೂ ನಿಂತಲ್ಲಿಯೇ ತೂಗತೊಡಗಿದೆ. ಅಷ್ಟರಲ್ಲಿ ಪಿ.ಎ. ಒಳಗೆ ಇಂಟರ್‌ಕಾಮ್‌ನಿಂದ ಫೋನ್ ಮಾಡಿ ತಿಳಿಸಿರಬೇಕು, ಒಳಗಿಂದ ಜಸವಿಂದರ್ ಸಿಂಗ್ ಬಾಗಿಲು ತೆಗೆದು ''ಮ್ಯಾಡಂ ಹೀಗೆ ತಿಳಿಸದೇ ಬಂದಿದ್ದೀರಿ. ನನ್ನನ್ನೇ ಕರೆಸಿಕೊಳ್ಳಬಹುದಿತ್ತು'' ಎನ್ನುತ್ತಾ ಒಳಗೆ ಕರೆದುಕೊಂಡು ಹೋದರು. ಆಫೀಸಿನ ಸೋಫಾದ ಮೇಲೆ ದಪ್ಪ ಡನ್‌ಲಪ್‌ದಿಂಬು

ವಿರಾಜಮಾನವಾಗಿತ್ತು. ಸಾಹೇಬರು ಇನ್ನೂ ಶೂಸು ಹಾಕಿಕೊಳ್ಳದೇ ಕಾಲುಚೀಲಗಳಲ್ಲಿಯೇ ನಡೆದುಕೊಂಡು ಬಂದಿದ್ದರು.

''ಪರವಾಗಿಲ್ಲ ಜಸವಿಂದರ್ ಪವರ್ ನ್ಯಾಪ್ ಜೋರಾಗಿತ್ತು'' ಎಂದು ಹಾಸ್ಯ ಮಾಡಿದೆ. ಮೊದಲೇ ದಷ್ಟಪುಷ್ಟ ಸರದಾರಜಿ. ಒಂದು ತರಹ ನಾಚಿಕೊಳ್ಳುತ್ತಾ ''ರಾತ್ರಿ ಚಂದೀಘಡದಿಂದ ವಿಮಾನ ತುಂಬಾ ತಡವಾಯಿತು ನಿದ್ರೆಯೇ ಇರಲಿಲ್ಲ. ಪವರ್ ನ್ಯಾಪ್ ಮಾಡುತ್ತಾ ನಿದ್ದೆಯೇ ಬಂದುಬಿಡ್ತು, ಬನ್ನಿ ಮ್ಯಾಡಂ ಕಾಫಿ ಕುಡಿಯೋಣ'' ಅಂದರು. ಅವರಿಗೆ ಪಾಪ ಮಧ್ಯ ನಿದ್ರೆಯಲ್ಲಿ ಎಚ್ಚರ ಮಾಡಿಸಿಬಿಟ್ಟಿದ್ದೆ. ಪೂರ್ತಿ ಜಾಗೃತವಾಗಲು ಅವರಿಗೆ ನಮ್ಮ ದಕ್ಷಿಣ ಭಾರತೀಯ ಫಿಲ್ಟರ್ ಕಾಫಿ ಬೇಕಾಗಿತ್ತು. ದಕ್ಷಿಣ ಭಾರತೀಯಳಾದ ನನಗೆ ಚಹಾದ ಮೋಹ. ಇಬ್ಬರೂ ನಮ್ಮ ಪೇಯಗಳನ್ನು ಹೀರಿ ಚರ್ಚಿಸಿದ ಮೇಲೆ ಕಾಫಿ, ಚಹಾ ಕಪ್ಪುಗಳನ್ನು ಎತ್ತಿಕೊಂಡು ಹೋಗಲು ಬಂದ ಗ್ರೂಪ್ ಡಿ. ಅವನಿಗೆ ತಮಿಳು ಭಾಷೆಯಲ್ಲಿ ಸೋಫಾದ ಮೇಲಿರುವ ದಿಂಬನ್ನು ತೆಗೆದಿಡಲು ಹೇಳಿದೆ.

ದೆಹಲಿಯ ನನ್ನ ಇನ್ನೊಬ್ಬ ಹಿರಿಯ ಬಾಸು ಶ್ರೀ ಮಿಶ್ರಾ ಅವರು ನನ್ನನ್ನು ತುರ್ತಾಗಿ ಮೀಟಿಂಗಿಗೆ ಕರೆದಿದ್ದರು. ನಾನೂ ಉತ್ಸಾಹದಿಂದ ಎಲ್ಲ ಪಾಯಿಂಟುಗಳನ್ನೂ ಬರೆದುಕೊಂಡು ಹೋಗಿದ್ದೆ. ಸಾಹೇಬರು ಪ್ರಶ್ನೆಯನ್ನು ಕೇಳಿದೊಡನೆ ನಾನು ಸರಸರನೆ ಫೈಲು ನೋಡುತ್ತಾ ಪಾಯಿಂಟುಗಳನ್ನು ಹೇಳತೊಡಗಿದೆ. ಸಾಹೇಬರು ಎರಡೂ ಕಣ್ಣುಗಳು ನನ್ನತ್ತಲೇ ನೆಟ್ಟಿದ್ದವು. ನಾನಂತೂ ಇನ್ನೂ ಉತ್ಸಾಹದಿಂದ ಒಂದೊಂದಾಗಿ ವಿವರಿಸುತ್ತಾ ಹೋದೆ. ನಾಲ್ಕೈದು ನಿಮಿಷಗಳು ಕಳೆದವು. ಸಾಹೇಬರ ದೃಷ್ಟಿ ಇನ್ನೂ ನನ್ನ ಮುಖದ ಕಡೆಗೇ ನೆಟ್ಟಿತ್ತು. ಆದರೆ ಅವರು ತಲೆದೂಗಿರಲಿಲ್ಲ ಅಥವಾ ಏನನ್ನೂ ಹೇಳಿರಲಿಲ್ಲ. ನಾನೋ ಸ್ವಲ್ಪ ಭಯಪಡುವವಳು. ಯಾಕೋ ಏನೋ ಹೇಳದೆ ದುರುದುರು ನೋಡುತ್ತಿರುವರಲ್ಲಾ ಇನ್ನೇನು ಆಪತ್ತು ಬರುವುದೋ ಎಂದುಕೊಳ್ಳುತ್ತಾ ಅಂಜುತ್ತಲೇ ''ಯುವರ್ ಕೈಂಡ್ ರೆಸ್ಪಾನ್ಸ್ ವುಡ್ ಹೆಲ್ಪ್ ಅಸ್ ಸರ್'' – ತಮ್ಮ ಪ್ರತಿಕ್ರಿಯೆಯಿಂದ ನಮಗೆ ಸಹಾಯವಾಗುತ್ತದೆ – ಎಂದು ಮೆಲ್ಲಗೆ ಹೇಳಿದೆ. ಊಹೂ. ಸಾಹೇಬರಿಂದ ಏನೂ ಸದ್ದಿಲ್ಲ. ತಲೆ ತೂಗುತ್ತಿಲ್ಲ. ನನ್ನ ಇನ್ನೊಬ್ಬ ಸಹೋದ್ಯೋಗಿ ಪಿಳ್ಳೆ ನನ್ನ ಪಕ್ಕ ಪಿಸುಗುಟ್ಟಿ ''ಸಾಹೇಬರು ನಶೆಯಲ್ಲಿದ್ದಾರೋ ಹೇಗೆ?'' ಎಂದ. ಅದೇ ಕ್ಷಣ ಸಾಹೇಬರ ಮುಖ ಬದಲಾಯಿತು. ಬೇಗೆ ಬೇಗ ತಲೆದೂಗುತ್ತಾ ''ಅಂದ ಹಾಗೆ ನಂದಿನಿ ನೀನು ಇಲ್ಲಿಯವರೆಗೆ ಹೇಳಿದ್ದನ್ನೆಲ್ಲಾ ಮತ್ತೊಮ್ಮೆ ಹೇಳಿಬಿಡು. ಆಮೇಲೆ ನನ್ನ ಮತ ತಿಳಿಸುತ್ತೇನೆ ಎಂದುಬಿಡುವುದೇ?'' ರಾತ್ರಿಯೆಲ್ಲಾ ರಾಮಾಯಣ ಕೇಳಿ ಮತ್ತೆ ರಾಮ ಸೀತೆಯರ ಸಂಬಂಧ ವಿವರಿಸತೊಡಗಿದೆ. ಸಧ್ಯ ಅಪ್ರೂವ್ ಮಾಡಿದರು. ಆಮೇಲೆ ಗೊತ್ತಾದದ್ದು ಮಿಶ್ರಾ ಸಾಹೇಬರು ಕಣ್ಣು ಬಿಟ್ಟುಕೊಂಡೇ ಪವರ್ ನ್ಯಾಪ್ ಹೊಡೆಯುವವರೆಂದು!

32 ವರ್ಷ ಸರ್ಕಾರೀ ಸೇವೆ ಸಲ್ಲಿಸಿ ಸ್ವಇಚ್ಛೆಯಿಂದ ನಿವೃತ್ತಳಾದ ಮೇಲೂ ನನಗೆ ಪವರ್ ನ್ಯಾಪ್ ಕಲೆ ಸಿದ್ದವಾಗಿಲ್ಲ. ಕಣ್ಣು ಮುಚ್ಚಿಕೊಂಡ ತಕ್ಷಣ ದೃಶ್ಯಗಳು ಬರುತ್ತವೆ. ತಲೆಯಲ್ಲಿ

ಯೋಚನೆಗಳು ಓಡುತ್ತವೆ. 3 ಈಡಿಯಟ್ಸ್ ಚಿತ್ರದಲ್ಲಿ ಪ್ರೊಫೆಸರ್ ವೀರೂ ಸಹಸ್ರಬುಧೆಯವರ ಪವರ್ ನ್ಯಾಪ್ ಜಗತ್ಪ್ರಸಿದ್ಧವಾಗಿದೆ. ಆಪೇರಾ ಸಂಗೀತದ ರೆಕಾರ್ಡು ಕೇಳುತ್ತಾ ಒಂದೇ ಬಗಲಲ್ಲಿ ಮಲಗಿಕೊಂಡು ಜವಾನನ ಹತ್ತಿರ ಮುಖಕ್ಷೌರ ಮಾಡಿಸಿಕೊಳ್ಳುತ್ತಾ ಸಮಯದ ಮಹತ್ವವನ್ನು ಕಾಪಾಡುವ ಆ ವಿಚಿತ್ರ ಮನುಷ್ಯನ ಪ್ರಸಂಗ ಎಲ್ಲರನ್ನೂ ನಗಿಸುತ್ತದೆ.

ಅತಿವೇಗದಲ್ಲಿ ಓಡುವ ಇಂದಿನ ಜಗದಲ್ಲಿ ಬಹುಶಃ ಪವರ್ ನ್ಯಾಪ್ ಎಲ್ಲರಿಗೂ ಅಗತ್ಯವೆಂದು ವೈದ್ಯರು ಹೇಳುತ್ತಿದ್ದಾರೆ. ಮೊನ್ನೆ ನನ್ನ ರಕ್ತದೊತ್ತಡ ನೋಡಲು ಬಂದಿದ್ದ ವೈದ್ಯರು ಕೂಡಾ ನನಗೆ ಪವರ್ ನ್ಯಾಪ್ ಮಾಡಿ ಎಂದು ಹೇಳಿದರು. ನನ್ನ ಹಿರಿಯ ಸಾಹೇಬರುಗಳೂ ಈಗ ನಿವೃತ್ತರಾಗಿಬಿಟ್ಟಿದ್ದಾರೆ. ಹಳೆಯ ಅಧಿಕಾರಶಾಹೀ ಕಳೆದು ಹೋದ ಮೇಲೆ ನನಗೂ ಈಗ ಭಯವಿಲ್ಲ. ಇಂದೇ ಅವರಿಬ್ಬರಿಗೂ ಫೋನಾಯಿಸಿ ಅವರ ಪವರ್ ನ್ಯಾಪ್ ಗುಟ್ಟುಗಳನ್ನು ಕೇಳುತ್ತೇನೆ. ಅವರೇನಾದರೂ ಸರಿಯಾಗಿ ಹೇಳಿಕೊಟ್ಟರೆ ನಿಮಗೂ ಹೇಳಿಕೊಡುತ್ತೇನೆ.

ಅಲ್ಲಿಯವರೆಗೆ.... ಹೋಗಿ — ಸಾಕು ಈ ಓದು — ಪವರ್ ನ್ಯಾಪ್ ಮಾಡಲು ಹೋಗಿ.

## ನಗುವಿನ ದಿನಗಳು

ಇಂದು, ನಾಳೆ, ನಾಡಿದ್ದು, ಆಚೆನಾಡಿದ್ದು ಒಂದೇ
ನಗುವಿನ ಭಾವದವರಿಗೆ ಎಲ್ಲಾ ದಿನ ಒಂದೇ
ನಕ್ಕರಷ್ಟು ನಿರಾಳ ಎಲ್ಲರ ಅಂತರಾಳ
ಆಗಲಿ ನಗದಿರುವ ದಿನಗಳೇ ತುಂಬಾ ವಿರಳ

## ನಗುಮೊಗ

ಮನೆಯಿಂದಾಚೆ ನಗುವಿನ ಮೊಗವಿರಲಿ
ಸಂಕಟವೇನಿದ್ದರೂ ಮನದೊಳಗೆ ಹುದುಗಿರಲಿ
ಅಳೆಯಿರಿ ಆನಂದವನ್ನು ನಗುವಿನ ಕೊಳಗದಲ್ಲಿ
ಅಳೆದಷ್ಟೂ ಹೆಚ್ಚು ನಗುವಿರುವುದು ಬಳಗದಲ್ಲಿ

## ಒಪ್ಪಿಕೊಂಡಿದ್ದಕ್ಕೆ.....

ಅವರಿಬ್ಬರೂ ಮುದುಕರು. ಸ್ನೇಹಿತರು. ಪ್ರತಿ ದಿನ ಪಾರ್ಕಿನಲ್ಲಿ ಕುಳಿತು ಹರಟೆ ಹೊಡೆಯುತ್ತಿದ್ದರು. ಒಂದು ದಿನ ಅವರಲ್ಲಿ ಒಬ್ಬ ಬರಲಿಲ್ಲ. ಹುಷಾರಿಲ್ಲ ಎಂದು ಕಾಣುತ್ತೆ ಎಂದು ಇವನು ಸಮಾಧಾನ ಪಟ್ಟಿಕೊಂಡ. ಆದರೆ ಒಂದು ವಾರವಾದರೂ ಅವನು ಬಾರದಿದ್ದಾಗ ಇವನಿಗೆ ಚಿಂತೆಯಾಗತೊಡಗಿತು. ಆದರೆ ಅವನ ವಿಳಾಸ ಗೊತ್ತಿರಲಿಲ್ಲ. ಹಾಗಾಗಿ ಅವನಿಗೆ ಏನಾಯಿತು? ಏನಾಗಿದೆ? ಎಂದು ತಿಳಿಯಲು ಆಗಲಿಲ್ಲ. ಒಂದು ತಿಂಗಳಾದರೂ ಏನೂ ಸುದ್ದಿ ಇಲ್ಲ. ಅವನ ಕತೆ ಮುಗಿದಿರಬಹುದು ಎಂದು ಇವನು ಅಂದುಕೊಂಡ. ಆದರೆ ಏನಾಶ್ಚರ್ಯ! ಒಂದು ದಿನ ಅವನು ಹಾಜರ್!

'ಅರೆ! ಎಲ್ಲಿ ಹೋಗಿದ್ದಿ? ಏನಾಗಿತ್ತು ನಿನಗೆ? ನನಗೆ ಚಿಂತೆಯಾಗಿತ್ತು' ಎಂದ.

'ನಾನು ಜೈಲಿನಲ್ಲಿದ್ದೆ ಇಷ್ಟು ದಿನ' ಎಂದಾಗ ಇವನಿಗೆ ಸಖತ್ ಆಶ್ಚರ್ಯ.

'ಜೈಲು? ಏಕೆ?' ಎಂದು ಕೇಳಿದ.

'ನನ್ನ ಮೇಲೆ ಹುಡುಗಿಯೊಬ್ಬಳು ಅತ್ಯಾಚಾರದ ಆಪಾದನೆ ಹೊರೆಸಿದಳು. ನನಗೀಗ ೮೯ ವರ್ಷ. ಆ ಅಪಾದನೆ ಕೇಳಿ ನನಗೆ ಅತೀವ ಖುಷಿ ಆಯಿತು. ಕೋರ್ಟಿನಲ್ಲಿ ಹೆಮ್ಮೆಯಿಂದ 'ಹೌದು ಅತ್ಯಾಚಾರ ಮಾಡಿದೆ' ಎಂದು ಒಪ್ಪಿಕೊಂಡೆ. ಅದಕ್ಕೆ..

ನ್ಯಾಯಾಧೀಶರು 'ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀಯ' ಎಂದು ೩೦ ದಿನ ಜೈಲು ಶಿಕ್ಷೆ ವಿಧಿಸಿದರು.'

---

## ಅಪರಂಜಿ ಸದಸ್ಯತ್ವದ ಮುನ್ನೋಟ

(30-04-2012ರ ವರೆಗೆ)

**ಕಳೆದ ಎರಡು ತಿಂಗಳಲ್ಲಿ ತಮ್ಮ ಚಂದಾವನ್ನು ನವೀಕರಿಸಿದವರು:**

3655 A ಶ್ರೀ ಜಿ. ರಾಜನ್, 3932 A ಶ್ರೀ ಎಂ.ಎನ್. ರಾಮಸ್ವಾಮಿ,
8161 A ಶ್ರೀಮತಿ ವಿಜಯ ಬಸವರಾಜ್, 8168 A ಶ್ರೀ ಪಿ. ಗಣಪತಿ ಭಟ್,
8493 A ಪ್ರಾಂಶುಪಾಲರು ಆರ್ಟ್ಸ್ ಕಾಲೇಜು, ಬಾದಾಮಿ,
8597 A ಶ್ರೀ ವೈ.ಎನ್. ಜಗದೀಶ್, 8515 A ಶ್ರೀ ಕೆ.ಎಸ್. ಶಾಮರಾವ್

**ನಮ್ಮ ಬಳಗಕ್ಕೆ ಹೊಸದಾಗಿ ಸೇರಿರುವವರು:**

8671 A ಶ್ರೀ ಬಿ.ಪಿ. ಶ್ರೀನಿವಾಸ ಮೂರ್ತಿ, 8672 A ಶ್ರೀಮತಿ ಸಿ. ಮಾಲತಿ,
8673 A ಡಾ|| ಅನಿಲ್ ಕುಮಾರ್, 4021 A ಶ್ರೀ ಆರ್.ಜಿ. ಸಿಡೆನೂರ್

**ಕೆಳಗಿನವರ ವಿಳಾಸ ಬದಲಾವಣೆಯನ್ನು ದಾಖಲಿಸಿಕೊಂಡಿದ್ದೇವೆ.**

3135 A ಶ್ರೀ ಶಶಿಕಾಂತ್ ಬೇಕಲ್, 8132 A ಶ್ರೀ ಎಸ್. ಶೇಷ ಮೂರ್ತಿ,
8144 A ಶ್ರೀ ಎಸ್. ರಾಜಾರಾಮ್, 8638 A ಶ್ರೀ ಎನ್. ಶಂಕರ್ ರಾವ್